ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಜ ನಿ : ಸುಮಪ : 2020–21 ದಿನಾಂಕ : 25–08–2020

# ಪತ್ರಿಕಾ ಆಮಂತ್ರಣ

## ಪತ್ರಿಕಾಗೋಷ್ಠಿ

ಜೆ. ಸಿ. ಮಾಧುಸ್ವಾಮಿ,
ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯದ ಅಧೀನದಲ್ಲಿ ಬರುವಂತಹ ಕಾನೂನು ಕಾಲೇಜುಗಳಲ್ಲಿ ಪರೀಕ್ಷೆ ನಡೆಸುವ ಸಂಬಂಧ ಚರ್ಚೆ ಹಾಗೂ ನಂತರ ಪತ್ರಿಕಾಗೋಷ್ಠಿ

ದಿನಾಂಕ : 26–08–2020, ಬುಧವಾರ, ಸಮಯ : ಬೆಳಿಗ್ಗೆ 11–00 ಗಂಟೆಗೆ

ಸ್ಥಳ : ಕೊಠಡಿ ಸಂಖ್ಯೆ 313, ವಿಧಾನ ಸೌಧ, ಮೂರನೇ ಮಹಡಿ, ಬೆಂಗಳೂರು

## 24.50 ಲಕ್ಷ ರೈತರಿಗೆ 14.500 ಕೋಟಿ ರೂ. ಬೆಳೆ ಸಾಲ ವಿತರಿಸುವ ಗುರಿ : ಎಸ್.ಟಿ. ಸೋಮಶೇಖರ್

ಬೆಂಗಳೂರು, ಆಗಸ್ಟ್ 25, ಕರ್ನಾಟಕ ವಾರ್ತೆ :

ಪ್ರಸಕ್ತ ಸಾಲಿನಲ್ಲಿ 24 ಲಕ್ಷ 50 ಸಾವಿರ ರೈತರಿಗೆ 14,500 ಕೋಟಿ ರೂ.ಗಳ ಬೆಳೆ ಸಾಲ ವಿತರಿಸುವ ಗುರಿ ಹೊಂದಲಾಗಿದೆ ಎಂದು ಸಹಕಾರ ಸಚಿವರಾದ ಎಸ್.ಟಿ. ಸೋಮಶೇಖರ್ ತಿಳಿಸಿದರು.

ಅವರು ಇಂದು ವಿಧಾನಸೌಧದಲ್ಲಿ ಹಮ್ಮಿಕೊಂಡಿದ್ದ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ಗಳ ಪ್ರಗತಿ ಪರಿಶೀಲನಾ ಸಭೆಯ ನಂತರ ಹಮ್ಮಿಕೊಂಡಿದ್ದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದರು.

ಈ ವರೆಗೆ 10,57,825 ರೈತರಿಗೆ 7038.91 ಕೋಟಿ ಸಾಲವನ್ನು ವಿತರಣೆ ಮಾಡಲಾಗಿದೆ. 4.50 ಲಕ್ಷ ಹೊಸ ಸದಸ್ಯ ರೈತರಿಗೆ 2,500 ಕೋಟಿ ಬೆಳೆ ಸಾಲ ವಿತರಿಸುವ ಗುರಿ ಹೊಂದಲಾಗಿದ್ದು, ಇದರಲ್ಲಿ 1 ಲಕ್ಷ ರೈತರಿಗೆ 626 ಕೋಟಿ ಬೆಳೆ ಸಾಲವನ್ನು ಈಗಾಗಲೇ ವಿತರಿಸಲಾಗಿದೆ ಎಂದರು.

ಕೃಷಿ, ಹೈನುಗಾರಿಕೆ, ಮೀನುಗಾರಿಕೆಗೆ ಹಾಗೂ ಬೆಳೆ ಸಾಲಕ್ಕೆ ಶೂನ್ಯ ಬಡ್ಡಿ ದರದಲ್ಲಿ 3 ಲಕ್ಷದವರೆಗೆ ಸಾಲ ವಿತರಣೆ ಮಾಡಲಾಗುವುದು.

ಪರಿಶಿಷ್ಟ ಜಾತಿ–ಪರಿಶಿಷ್ಟ ಪಂಗಡದ ಸದಸ್ಯರುಗಳಿಗೆ ಈಗಾಗಲೇ 1.10 ಲಕ್ಷ ರೈತರಿಗೆ 842 ಕೋಟಿಗಳ ಬೆಳೆ ಸಾಲ ವಿತರಣೆ ಮಾಡಲಾಗಿದೆ. ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ–ಪರಿಶಿಷ್ಟ ಪಂಗಡದ ಸದಸ್ಯರುಗಳಿಗೆ ಸಾಲ ವಿತರಿಸಲು ಎಲ್ಲಾ ಡಿ.ಸಿ.ಸಿ ಬ್ಯಾಂಕುಗಳಿಗೆ ಸೂಚನೆ ನಿಡಲಾಗಿದೆ.

ಹೈನುಗಾರಿಕೆ ಮತ್ತು ಮೀನಿಗಾರಿಕೆಗೆ 2020–21 ರಲ್ಲಿ 42 ಸಾವಿರ ರೈತರಿಗೆ 100 ಕೋಟಿ ರೂ. ಸಾಲ ವಿತರಿಸುವ ಗುರಿ ಹೊಂದಿದ್ದು ಈಗಾಗಲೇ 13,266 ರೈತರಿಗೆ 22 ಕೋಟಿ ರೂ.ಗಳ ಸಾಲ ವಿತರಣೆ ಮಾಡಲಾಗಿದೆ.

ಕೊರೋನಾ ಸಂದರ್ಭದಲ್ಲಿ ಅತ್ಯಂತ ಯಶಸ್ವಿಯಾಗಿ ಕಾರ್ಯನಿರ್ವಹಿಸಿದ 42,537 ಆಶಾ ಕಾರ್ಯಕರ್ತೆಯರ ಪೈಕಿ 41,836 ಆಶಾ ಕಾರ್ಯಕರ್ತೆಯರಿಗೆ ತಲಾ 3 ಸಾವಿರ ರೂ.ಗಳನ್ನು ನೀಡಲಾಗಿದ್ದು, ಬಾಕಿ ಇರುವ 695 ಆಶಾ ಕಾರ್ಯಕರ್ತೆಯರಿಗೆ ಶೀಘ್ರದಲ್ಲಿ ವಿತರಿಸಲಾಗುವುದು.

ರಾಜ್ಯದಲ್ಲಿ ಒಟ್ಟು 21 ಡಿ.ಸಿ.ಸಿ. ಬ್ಯಾಂಕುಗಳಿದ್ದು, 1 ಅಪೆಕ್ಸ್ ಬ್ಯಾಂಕ್ ಮತ್ತು 5,489 ಪ್ಯಾಕ್ಸ್‌ಗಳಿದ್ದು ಇವುಗಳನ್ನು ಒಂದೇ ಸಾಫ್ಟ್‌ವೇರ್ ಅಡಿಯಲ್ಲಿ ಸಂಪೂರ್ಣ ಗಣಕೀಕರಣ ಮಾಡುವ ನಿಟ್ಟಿನಲ್ಲಿ ಕ್ರಮಕೈಗೊಳ್ಳಲಾಗುತ್ತಿದೆ ಎಂದರು.

ಬೆಳಗಾವಿ, ಗುಲ್ಬರ್ಗಾ, ಬೆಂಗಳೂರು ಮತ್ತು ಮೈಸೂರು ಈ 4 ವಿಭಾಗಗಳಲ್ಲಿ ಜಿಲ್ಲಾ ಸಹಕಾರ ಬ್ಯಾಂಕುಗಳನ್ನು ಜನಸ್ನೇಹಿ ಬ್ಯಾಂಕುಗಳನ್ನಾಗಿ ಹಾಗೂ ಹೆಚ್ಚು ಬಡ ಮತ್ತು ಮಧ್ಯಮ ವರ್ಗದ ಜನರಿಗೆ ಎಲ್ಲಾ ಸಾಲ ಯೋಜನೆಗಳು ಸುಲಭವಾಗಿ ದೊರಕುವಂತೆ ಮಾಡಲು ಮುಖ್ಯಮಂತ್ರಿಗಳು ನಿರ್ದೇಶಿಸಿದ್ದು, ಶೀಘ್ರದಲ್ಲಿಯೇ ಸಾಲ–ಮೇಳಗಳನ್ನು ಹಮ್ಮಿಕೊಳ್ಳಲಾಗುವುದು ಎಂದರು.

## ಸರ್ಕಾರವು ಅನುಷ್ಠಾನಗೊಳಿಸುವ ಯೋಜನೆಗಳನ್ನು

## ನಿಗಧಿತ ಅವಧಿಯೊಳಗೆ ಪೂರ್ಣಗೊಳಿಸಿ : ಎಸ್.ಟಿ.ಸೋಮಶೇಖರ್

ಬೆಂಗಳೂರು, ಆಗಸ್ಟ್ 25, ಕರ್ನಾಟಕ ವಾರ್ತೆ :

ಸರ್ಕಾರವು ಜನಸಾಮಾನ್ಯರಿಗಾಗಿ ಅನುಷ್ಠಾನಗೊಳಿಸುವ ಯೋಜನೆಗಳನ್ನು ನಿಗಧಿತ ಅವಧಿಯೊಳಗೆ ಪೂರ್ಣಗೊಳಿಸಿ ಎಂದು ಎಲ್ಲಾ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ಗಳ ಅಧಿಕಾರಿಗಳಿಗೆ ಸೂಚಿಸಿದರು.

ಅವರು ಇಂದು ವಿಧಾನಸೌಧದಲ್ಲಿ ಹಮ್ಮಿಕೊಂಡಿದ್ದ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಅಲ್ಪಾವಧಿ ಮತ್ತು ಮಧ್ಯಮಾವಧಿ ಯೋಜನೆಯಡಿ ನೀಡಿರುವ ಸಾಲಗಳನ್ನು ವಸೂಲಿ ಮಾಡುವ ಜೊತೆಗೆ, 16 ಡಿ.ಸಿ.ಸಿ ಬ್ಯಾಂಕ್‌ಗಳು 119 ಸಕ್ಕರೆ ಕಾರ್ಖಾನೆಗಳಿಗೆ ನೀಡಿರುವ 5,229 ಕೋಟಿ ರೂ.ಗಳ ಸಾಲವನ್ನು ವಸೂಲಿ ಮಾಡಬೇಕು.

ಸಕ್ಕರೆ ಕಾರ್ಖಾನೆಗಳಿಗೆ ಕೊಟ್ಟಿರುವ ಸಾಲಕ್ಕೆ ಇದುವರೆಗಿನ ಬಡ್ಡಿ ಎಷ್ಟು ಹಾಗೂ ಮಾಲೀಕರ ವಿವರವನ್ನು ಒಂದುವಾರದೊಳಗೆ ನೀಡುವಂತೆ ಸಂಬಂಧಿಸಿದ ಬ್ಯಾಂಕ್ ಅಧಿಕಾರಿಗಳಿಗೆ ಸೂಚಿಸಿದರು.

ಹೆಚ್ಚಿನ ಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸದಸ್ಯರಿಗೆ ಸಾಲ ವಿತರಿಸಬೇಕೆಂದರು.

ಸಭೆಯಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿ ತುಷಾರ್ ಗಿರಿನಾಥ್, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳ ಅಧಿಕಾರಿಗಳು ಉಪಸ್ಥಿತರಿದ್ದರು.

## ಬಿ.ಬಿ.ಎಂ.ಪಿ. ಸಾರ್ವತ್ರಿಕ ಚುನಾವಣೆ

### ನಿಗದಿತ ಅವಧಿಯೊಳಗೆ ಮತದಾರರ ಪಟ್ಟಿಯನ್ನು ಸಿದ್ಧಪಡಿಸಲು ಸೂಚನೆ

ಬೆಂಗಳೂರು, ಆಗಸ್ಟ್ 25, ಕರ್ನಾಟಕ ವಾರ್ತೆ :

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಾರ್ವತ್ರಿಕ ಚುನಾವಣೆ ನಡೆಸುವ ಸಂಬಂಧ ಮತದಾರರ ಪಟ್ಟಿ ತಯಾರಿಕೆ ಹಾಗೂ ಇತರೆ ಪೂರ್ವ ಸಿದ್ಧತೆಗಳ ಬಗ್ಗೆ ಚರ್ಚಿಸುವ ಸಲುವಾಗಿ ಆಯುಕ್ತರು, ರಾಜ್ಯ ಚುನಾವಣಾ ಆಯೋಗ ಅವರ ಅಧ್ಯಕ್ಷತೆಯಲ್ಲಿ ಇಂದು ಆಯೋಗದಲ್ಲಿ ಸಭೆ ನಡೆಸಲಾಯಿತು.

ಸದರಿ ಸಭೆಯಲ್ಲಿ ಬಿ.ಬಿ.ಎಂ.ಪಿ.ಯ ಆಯುಕ್ತರು, ರಾಜ್ಯ ಚುನಾವಣಾ ಆಯೋಗದ ಕಾರ್ಯದರ್ಶಿಗಳು ಹಾಗೂ ಮತದಾರರ ಪಟ್ಟಿ ಸಿದ್ದತೆಗಾಗಿ ಆಯೋಗದಿಂದ ನೇಮಕಗೊಂಡಂತಹ ಜಿಲ್ಲಾ ಚುನಾವಣಾಧಿಕಾರಿಗಳಾದ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ವಿಶೇಷ ಆಯುಕ್ತರು(ಆಡಳಿತ), ಬಿ.ಬಿ.ಎಂಪಿ. ಜಂಟಿ ಆಯುಕ್ತರು(ದಕ್ಷಿಣ), ಜಂಟಿ ಆಯುಕ್ತರು (ಮಹದೇವಪುರ), ಜಂಟಿ ಆಯುಕ್ತರು ರಾಜರಾಜೇಶ್ವರಿನಗರ, ಜಂಟಿ ಆಯುಕ್ತರು, ಬೊಮ್ಮನಹಳ್ಳಿ ಸಹಾಯಕ ಆಯುಕ್ತರು(ಚುನಾವಣೆ) ಬಿ.ಬಿ.ಎಂ.ಪಿ. ಇವರುಗಳು ಹಾಜರಾಗಿದ್ದರು.

ಚಾಲ್ತಿಯಲ್ಲಿರುವ ಕರ್ನಾಟಕ ವಿಧಾನ ಸಭಾ ಮತದಾರರ ಪಟ್ಟಿಯನ್ನು ಅಳವಡಿಸಿಕೊಂಡು ಸರ್ಕಾರವು 23-6-2020 ರಂದು ಹೊರಡಿಸಿರುವ ಬಿ.ಬಿ.ಎಂ.ಪಿ.ಯ ವಾರ್ಡುಗಳ ಪುನರ್ ವಿಂಗಡಣೆಯ ಅಂತಿಮ ಅಧಿಸೂಚನೆ ಅನುಸಾರವಾಗಿ ವಾರ್ಡುವಾರು ಮತದಾರರ ಪಟಿಯನ್ನು ಸಿದ್ಧಪಡಿಸುವ ಬಗ್ಗೆ ಆಯೋಗದಿಂದ ಆಗಸ್ಟ್ 12 ರಂತೆ ಸೂಚನೆಗಳನ್ನು ನೀಡಲಾಗಿದೆ.

ವಾರ್ಡುಗಳ ಪುನರ್ ವಿಂಗಡಣೆಯ ಅನುಗುಣವಾಗಿ ಮತದಾರರ ಪಟ್ಟಿಯನ್ನು ಸಿದ್ಧಪಡಿಸುವ ಬಗ್ಗೆ ಸಭೆಯಲ್ಲಿ ವಿಸ್ತೃತವಾಗಿ ಚರ್ಚಿಸಲಾಯಿತು. ಆಯೋಗದ ಸೂಚನೆಯಂತೆ ವಾರ್ಡುವಾರು ಮತದಾರರ ಪಟ್ಟಿ ಸಿದ್ಧತೆಗಾಗಿ ಮತದಾರರ ನೋಂದಣಾಧಿಕಾರಿ ಮತ್ತು ಸಹಾಯಕ ಮತದಾರರ ನೋಂದಣಾಧಿಕಾರಿಗಳನ್ನು ಒಳಗೊಂಡಂತೆ ಇತರೆ ಅಧಿಕಾರಿ / ಸಿಬ್ಬಂದಿಗಳಿಗೆ ಆಗಸ್ಟ್ 21 ರಂದು ತರಬೇತಿಯನ್ನು ನೀಡಲಾಗಿದೆ ಎಂದು ಬಿ.ಬಿ.ಎಂ.ಪಿ. ಆಯುಕ್ತರು ತಿಳಿಸಿದರು. ವಾರ್ಡು ಪುನರ್ ವಿಂಗಡಣೆಯಂತೆ ಪ್ರತಿಯೊಂದು ವಾರ್ಡಿನ ಗಡಿ ಸರಹದ್ದಿನಲ್ಲಿರುವ ಮತದಾರರನ್ನು ಗುರುತಿಸಿ ಯಾವುದೇ ಮತದಾರರ ಹೆಸರುಗಳು ಒಂದಕ್ಕಿಂತ ಹೆಚ್ಚು ವಾರ್ಡಿನ ಮತದಾರರ ಪಟ್ಟಿಯಲ್ಲಿ ಪುನರಾವರ್ತನೆಯಾಗದಂತೆ ಹಾಗೂ ಆಯಾ ವಾರ್ಡಿನ ಮತದಾರರು ಆಯಾ ವಾರ್ಡಿನಲ್ಲೇ ಇರುವಂತೆ ಯಾವುದೇ ಲೋಪದೋಷಗಳಿಗೆ ಅವಕಾಶ ನೀಡದಂತೆ ಹಾಗೂ ಆಯೋಗವು ನಿಗದಿಪಡಿಸಿದ ವೇಳಾಪಟ್ಟಿಯಂತೆ ನಿಗದಿತ ಅವಧಿಯೊಳಗೆ ಮತದಾರರ ಪಟ್ಟಿಯನ್ನು ಸಿದ್ಧಪಡಿಸುವಂತೆ ಆಯೋಗದ ಆಯುಕ್ತರು ಜಿಲ್ಲಾ ಚುನಾವಣಾಧಿಕಾರಿಗಳಿಗೆ ಸೂಚಿಸಿದರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಕೃಷಿ ಪ್ರಶಸ್ತಿಗೆ ಅರ್ಜಿ ಆಹ್ವಾನ

**ಬೆಂಗಳೂರು, ಆಗಸ್ಟ್ 25( ಕರ್ನಾಟಕ ವಾರ್ತೆ ) :**

2020-21ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಕೃಷಿ ಪ್ರಶಸ್ತಿಗಾಗಿ ರಾಜ್ಯ ಕೃಷಿ ಇಲಾಖೆ ಅರ್ಜಿಗಳನ್ನು ಆಹ್ವಾನಿಸಿದೆ.

ಕೃಷಿ ಪ್ರಶಸ್ತಿಯನ್ನು ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ನೀಡಲಾಗುತ್ತಿದ್ದು, ಈ ಕೃಷಿ ಪ್ರಶಸ್ತಿಗೆ ರೈತರು ನಿಗದಿತ ನಮೂನೆಯಲ್ಲಿ ಒಂದೇ ಅರ್ಜಿ ಸಲ್ಲಿಸಬೇಕು. ಪ.ಜಾ/ಪ.ವರ್ಗದ ರೈತರಿಗೆ ರೂ.25.00 ಮತ್ತು ಸಾಮಾನ್ಯ ರೈತರಿಗೆ ರೂ.100.00 ಪ್ರವೇಶ ಶುಲ್ಕ ಭರಿಸಬೇಕಾಗುತ್ತದೆ. 2020-21ನೇ ಸಾಲಿನ ಮುಂಗಾರು ಹಂಗಾಮಿನ ಬೆಳೆ ಸ್ಪರ್ಧೆ ಪ್ರಶಸ್ತಿಗೆ ರೈತರು ಅರ್ಜಿ ಸಲ್ಲಿಸಲು 15ನೇ ಸೆಪ್ಟೆಂಬರ್ 2020 ಕೊನೆಯ ದಿನಾಂಕವಾಗಿರುತ್ತದೆ.

ಸ್ಪರ್ಧಿಸಬಹುದಾದ ಬೆಳೆಗಳ ವಿವರಗಳು, ಅರ್ಜಿ ನಮೂನೆ, ಸ್ಪರ್ಧಿಸಲು ಅರ್ಹತೆ ಮತ್ತಿತರ ಹೆಚ್ಚಿನ ಮಾಹಿತಿಗಾಗಿ ಹತ್ತಿರದ ರೈತ ಸಂಪರ್ಕ ಕೇಂದ್ರದ ವಿಸ್ತರಣಾ ಕಾರ್ಯಕರ್ತರು ಅಥವಾ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರನ್ನು ಸಂಪರ್ಕಿಸಲು ಕೋರಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಪರೀಕ್ಷಾ ವೇಳಾಪಟ್ಟಿ ಪ್ರಕಟ

**ಬೆಂಗಳೂರು, ಆಗಸ್ಟ್ 25 (ಕರ್ನಾಟಕ ವಾರ್ತೆ)**

ಕರ್ನಾಟಕರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 2011-12, 2012-13 ಮತ್ತು 2018-19ನೇ ಸಾಲಿನಲ್ಲಿ ಪ್ರಥಮ, ದ್ವಿತೀಯ ಮತ್ತು ತೃತೀಯ ವರ್ಷದ ಬಿ.ಎ., ಬಿ.ಕಾಂ., ಪದವಿಗೆ ಪ್ರವೇಶ ಪಡೆದು ಅನುತ್ತೀರ್ಣಗೊಂಡಿರುವ ಅಥವಾ ಪರೀಕ್ಷೆ ತೆಗೆದುಕೊಂಡಿಲ್ಲದ ವಿದ್ಯಾರ್ಥಿಗಳಿಗೆ ಈ ಹಿಂದೆ ಅಂದರೆ ಮಾರ್ಚ್2020ರಲ್ಲಿ ಪರೀಕ್ಷೆಯನ್ನು ಏರ್ಪಡಿಸಲಾಗಿತ್ತು. ನಂತರ ಕೋವಿಡ್-19 ಸಾಂಕ್ರಮಿಕ ರೋಗದಿಂದಾಗಿ ಪರೀಕ್ಷೆಯನ್ನು ಮುಂದೂಡಲಾಗಿತ್ತು, ಅದೇ ರೀತಿ ಪ್ರಥಮ ಮತ್ತು ದ್ವಿತೀಯ ಸೆಮಿಸ್ಟರ್ ಎಂ.ಬಿ.ಎ ಪದವಿಗೆ 2014-15, 2018-19(ಜನವರಿ ಆವೃತಿ) ಮತ್ತು 2019-20 (ಜುಲೈ ಆವೃತಿ) ಸಾಲಿನಲ್ಲಿ ಪ್ರವೇಶ ಪಡೆದು ಪರೀಕ್ಷೆ ತೆಗೆದುಕೊಂಡಿರುವ ವಿದ್ಯಾರ್ಥಿಗಳ ಪರೀಕ್ಷೆಯನ್ನು ಕೋವಿಡ್-19 ಸಾಂಕ್ರಮಿಕ ರೋಗದಿಂದಾಗಿ ಮುಂದೂಡಲಾಗಿತ್ತು.

ಮುಂದೂಡಲಾದ ಪರೀಕ್ಷೆಗಳ ಪರಿಷ್ಕೃತ ವೇಳಾಪಟ್ಟಿಯನ್ನು ಕರಾಮುವಿಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದ್ದು, ಪರೀಕ್ಷೆಗಳು 2020 ಸೆಪ್ಟೆಂಬರ್ 01 ರಿಂದ (ಬಿ.ಎ./ಬಿ.ಕಾಂ.) ಹಾಗು ಸೆಪ್ಟೆಂಬರ್ 05 (ಎಂ.ಬಿ.ಎ.)ರಂದು ನಿಗದಿತ ಪರೀಕ್ಷಾ ಕೇಂದ್ರದಲ್ಲಿ(ವಿ.ವಿ.ಪುರಂ. ಕಲಾ ಕಾಲೇಜು, ಕೆ.ಆರ್. ರಸ್ತೆ, ಬೆಂಗಳೂರು) ನಡೆಯಲಿದೆ. ಹೆಚ್ಚಿನ ಮಾಹಿತಿಗಾಗಿಘಷ್ಕೃತ ಅಂದರೆ ಪರಿಷ್ಕೃತ ಪರೀಕ್ಷಾ ವೇಳಾಪಟ್ಟಿಗಾಗಿ ವಿಶ್ವವಿದ್ಯಾನಿಲಯದ ವೆಬ್‌ಸೈಟ್ www.ksoumysuru.ac.inಅನ್ನು ಸಂಪರ್ಕಿಸುವಂತೆ ಪ್ರಾದೇಶಿಕ ನಿರ್ದೇಶಕರಾದ ಗಿರೀಶ್ ಹೆಚ್.ಎನ್. ರವರು ತಿಳಿಸಿರುತ್ತಾರೆ.

ಹೆಚ್ಚಿನ ಮಾಹಿತಿಗಾಗಿ ಪ್ರಾದೇಶಿಕ ನಿರ್ದೇಶಕರು, ಕ.ರಾ.ಮು.ವಿ. ಬೆಂಗಳೂರು ಪ್ರಾದೇಶಿಕ ಕೇಂದ್ರ, ನಂ-61, 5ನೇ ಮುಖ್ಯರಸ್ತೆ, 5ನೇ ಅಡ್ಡರಸ್ತೆ, ಚಾಮರಾಜಪೇಟೆ, ಬೆಂಗಳೂರು-18. ಕಛೇರಿದೂರವಾಣಿ ಸಂಖ್ಯೆ:- 26603664ಅನ್ನು ಸಂಪರ್ಕಿಸಬಹುದಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಎಸಿಬಿ ದಾಳಿ

**ಬೆಂಗಳೂರು, ಆಗಸ್ಟ್ 25( ಕರ್ನಾಟಕ ವಾರ್ತೆ ) :**

ಭ್ರಷ್ಟಾಚಾರ ನಿಗ್ರಹ ದಳದಲ್ಲಿ ಟಿಡಿಆರ್ ಅವ್ಯವಹಾರಗಳ ಕುರಿತು ಪ್ರಕರಣಗಳನ್ನು ದಾಖಲಿಸಿ ತನಿಖೆಯನ್ನು ಕೈಗೊಳ್ಳಲಾಗಿರುತ್ತದೆ.

ಪ್ರಕರಣದ ತನಿಖಾ ಕಾಲದಲ್ಲಿ ಕೆಲವು ಸರ್ಕಾರಿ ಅಧಿಕಾರಿಗಳು ತಮ್ಮ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡು ಖಾಸಗಿ ವ್ಯಕ್ತಿಗಳೊಂದಿಗೆ ಶಾಮೀಲಾಗಿ ಬಿಬಿಎಂಪಿ ರಸ್ತೆ ಅಗಲೀಕರಣಕ್ಕೆ ವಶಪಡಿಸಿಕೊಳ್ಳಬೇಕಾದ ಸೈಟುಗಳು ಮತ್ತು ಬಿಲ್ಡಿಂಗ್‌ಗಳ ಜಾಗಕ್ಕಿಂತ ಹೆಚ್ಚು ಜಾಗಕ್ಕೆ ಬೆಲೆ ನಿಗಧೀಕರಣ ಮಾಡಿಸಿಕೊಂಡು ಗ್ರಾಮಪಂಚಾಯ್ತಿಯಲ್ಲಿ ಖಾತಾ ಹೊಂದಿರುವುದನ್ನು ಮರೆಮಾಚಿ ಕೃಷಿ ಭೂಮಿಯ ದರಗಳನ್ನು ಕಟ್ಟಡಗಳ ಮೌಲ್ಯ ಮಾಪನಗಳನ್ನು ನಿಗದಿಪಡಿಸುವಾಗ ಟಿಡಿಆರ್ ವಿಸ್ತೀರ್ಣವನ್ನು ಕಾನೂನು ಬಾಹಿರವಾಗಿ ಹೆಚ್ಚಾಗಿ ವಿತರಣೆ ಮಾಡಿ ಆ ಮೂಲಕ ಖಾಸಗಿ ವ್ಯಕ್ತಿಗಳಿಗೆ ಅಕ್ರಮ ಲಾಭ ಮಾಡಿಕೊಟ್ಟು **ಬಿಬಿಎಂಪಿಗೆ ಮತ್ತು ಸರ್ಕಾರಕ್ಕೆ ಕೋಟ್ಯಾಂತರ ನಷ್ಟವುಂಟು** ಮಾಡಿರುತ್ತಾರೆ. ಸದರಿ ಜಾಗದಲ್ಲಿ ಸ್ವಾಧೀನಾನುಭವದಲ್ಲಿರುವ ಸೈಟ್ ಮಾಲೀಕರಿಗೆ ಸರ್ಕಾರದಿಂದ ಯಾವುದೇ ಪರಿಹಾರ ಸಿಗದಂತೆ ನೋಡಿಕೊಂಡಿರುತ್ತಾರೆ. ಸರ್ಕಾರ ಹಾಗೂ ಬಿ.ಬಿ.ಎಂ.ಪಿ ವತಿಯಿಂದ ಹೊರಡಿಸಲಾದ ಸುತ್ತೋಲೆಯಂತೆ ಹಕ್ಕು ಬಿಡುಗಡೆ ಪತ್ರ ಪಡೆದ ಕಟ್ಟಡಗಳ/ಜಾಗದ ಭೌತಿಕ ಸ್ವಾಧೀನ ಪಡೆಯದೆಯೇ ಖಾತಾವನ್ನು ಬಿ.ಬಿ.ಎಂ.ಪಿ ಹೆಸರಿಗೆ ವರ್ಗಾಯಿಸದೆ, ಅಕ್ರಮವಾಗಿ ಖೊಟ್ಟಿ ಭೂಮಾಲೀಕೆರಿಗೆ ಡಿ.ಆರ್.ಸಿ ವಿತರಣೆ ಮಾಡಿರುವುದು ಕಂಡು ಬಂದಿರುತ್ತದೆ.

ಈ ದಿನ ದಿನಾಂಕ: 25.08.2020 ರಂದು ತನಿಖೆಯನ್ನು ಮುಂದುವರೆಸಲಾಗಿದ್ದು ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ರಾಂಪುರ ಗ್ರಾಮದ ಸರ್ವೆ ನಂ.149 ಹಾಗೂ ಇಲ್ಲಿನ ಜಾಗಕ್ಕೆ ಕೊತ್ತನೂರು-ಆವಲಹಳ್ಳಿ ಮುಖ್ಯ ರಸ್ತೆಯ ಅಗಲೀರಣಕ್ಕೆ ಸಂಬಂಧಿಸಿದಂತೆ,

**1. ಟಿ.ಡಿ.ಆರ್ ಅರ್ಜಿಯನ್ನು ಪ್ರಸ್ತುತ ಸ್ವಾಧೀನಾನುಭವದಲ್ಲಿರುವ ಕಟ್ಟಡಗಳ ಮಾಲೀಕರುಗಳಿಂದ ಪಡೆಯದೇ, ಆರ್.ಟಿ.ಸಿ ಯಲ್ಲಿ ಹೆಸರಿರುವ ಹಿಂದಿನ ಜಮೀನಿನ ಮಾಲೀಕರಿಂದ ಅರ್ಜಿಯನ್ನು ಪಡೆದಿರುತ್ತಾರೆ.**

**2. ನಂತರ ಬಿ.ಬಿ.ಎಂ.ಪಿ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ಅಳತೆಗಳನ್ನು ಪಡೆದು ರೆವೆನ್ಯೂ ನಕ್ಷೆಯನ್ನು ತಯಾರಿಸಿದ್ದು, ಈ ನಕ್ಷೆಯಲ್ಲಿ ರಾಂಪುರ ಗ್ರಾಮದ ಸರ್ವೆ ನಂ.149 ರಲ್ಲಿ ಒಟ್ಟು 6 ಕಟ್ಟಡಗಳು ರಸ್ತೆ ಅಗಲೀಕರಣಕ್ಕೆ ಒಳಪಡುವುದಾಗಿ ಹಾಗೂ ಈ ಕಟ್ಟಡಗಳ ಮಾಲೀಕರು ಆರ್.ಟಿ.ಸಿ ಯಲ್ಲಿ ಹೆಸರಿಸುವ ಈ ಹಿಂದಿನ ಭೂಮಾಲೀಕರಾದ ಶ್ರೀ.ಆರ್.ಕೆ.ಸುಬ್ಬರಾವ್ ಎಂದು ನಮೂದಿಸಿರುತ್ತಾರೆ. ಆದರೆ ಸುಮಾರು 25 ವರ್ಷಗಳಿಂದ ಇಲ್ಲಿ ಬೇರೆ-ಬೇರೆ ಮಾಲೀಕರು ಮನೆಗಳನ್ನು ನಿರ್ಮಾಣ ಮಾಡಿಕೊಂಡಿದ್ದು, ಗ್ರಾಮ ಪಂಚಾಯ್ತಿಯಲ್ಲಿ ಖಾತಾವನ್ನು ಪಡೆದಿರುತ್ತಾರೆ ಹಾಗೂ ಪ್ರತ್ಯೇಕ ವಿದ್ಯುತ್ ಸಂಪರ್ಕವನ್ನು ಹೊಂದಿರುತ್ತಾರೆ.**

3.ಮೇಲ್ಕಂಡಂತೆ ರೆವೆನ್ಯೂ ನಕ್ಷೆಯಲ್ಲಿ ನಮೂದಿಸಿದ 6 ಕಟ್ಟಡಗಳ ಮೌಲ್ಯಮಾಪನವನ್ನು ತಯಾರಿಸಿ ಈ ಮೌಲ್ಯವನ್ನು ಡಿ.ಆರ್.ಸಿ ವಿಸ್ತೀರ್ಣಕ್ಕೆ ಪರಿವರ್ತಿಸುವಾಗ ಗ್ರಾಮ ಪಂಚಾಯ್ತಿ ಖಾತಾ ಹೊಂದಿರುವ ಕಟ್ಟಡಗಳನ್ನು ಕೃಷಿ ಭೂಮಿಯಲ್ಲಿರುವುದಾಗಿ, ಕೃಷಿ ಭೂಮಿಯ ಮಾರ್ಗಸೂಚಿ ದರಗಳನ್ನು ಕಾನೂನು ಬಾಹಿರವಾಗಿ ಅಳವಡಿಸಿಕೊಂಡು ವಾಸ್ತವವಾಗಿ ನೀಡಬೇಕಾಗಿದ್ದ 6314.44 ಚ.ಮೀಗಳಿಗೆ ಬದಲಾಗಿ ಅಕ್ರಮವಾಗಿ ಬಿ.ಬಿ.ಎಂ.ಪಿ ಅಧಿಕಾರಿಗಳು 16151.19 ಚ.ಮೀ.ಗಳ ಡಿ.ಆರ್.ಸಿ ಯನ್ನು ವಿತರಣೆ ಮಾಡಿರುತ್ತಾರೆ.

4. ಬಿ.ಬಿ.ಎಂ.ಪಿ ಅಧಿಕಾರಿಗಳು ಕಟ್ಟಡ ಮೌಲ್ಯಮಾಪನ ಮಾಡುವ ಸಮಯದಲ್ಲಿ ಸುಮಾರು 15-20 ವರ್ಷಗಳ ಹಿಂದೆ ನಿರ್ಮಾಣ ಮಾಡಿರುವ ಹಳೆಯ ಕಟ್ಟಡಗಳನ್ನು 6 ವರ್ಷಗಳ ಕಟ್ಟಡಗಳೆಂದು ನಮೂದಿಸಿಕೊಂಡು ಕಟ್ಟಡಗಳ ಮೌಲ್ಯವನ್ನು ಲೆಕ್ಕ ಮಾಡುವ ಮೂಲಕ ಹೆಚ್ಚು ಮೌಲ್ಯವನ್ನು ಅಕ್ರಮವಾಗಿ ನಿಗದಿಪಡಿಸಿರುತ್ತಾರೆ.

5. ಬಿ.ಬಿ.ಎಂ.ಪಿ ಹಾಗೂ ಸರ್ಕಾರ ಹೊರಡಿಸಿರುವ ಅಧಿಸೂಚನೆ, ಸುತ್ತೋಲೆ ಮತ್ತು ಕಛೇರಿ ಆಧೇಶಗಳಲ್ಲಿ ಸೂಚಿಸಿರುವಂತೆ ರಸ್ತೆ ಅಗಲೀಕರಣದ ಸಲುವಾಗಿ ಹಕ್ಕು ಬಿಡುಗಡೆ ಪತ್ರವನ್ನು ಬಿ.ಬಿ.ಎಂ.ಪಿ ಹೆಸರಿಗೆ ಪಡೆದ ನಂತರ ರಸ್ತೆ ಅಗಲೀಕರಣಕ್ಕೆ ಒಳಪಡುವ ಜಾಗದಲ್ಲಿರುವ ಕಟ್ಟಡಗಳನ್ನು ಡೆಮಾಲಿಷನ್ ಮಾಡಿ ಜಾಗದ ಭೌತಿಕ ಸ್ವಾಧೀನ ಪಡೆಯದೆ, ಸ್ವತ್ತಿ ಖಾತಾವನ್ನು ಬಿ.ಬಿ.ಎಂ.ಪಿ ಹೆಸರಿಗೆ ವರ್ಗಾಯಿಸದೇ, ಈ ವಿವರಗಳನ್ನು ಬಿ.ಬಿ.ಎಂ.ಪಿ ಯ ಆಸ್ತಿ ವಹಿ ಹಾಗೂ ರೋಡ್ ರಿಜಿಸ್ಟರ್‌ನಲ್ಲಿ ನಮೂದಿಸದೇ, ಅಕ್ರಮವಾಗಿ ಡಿ.ಆರ್.ಸಿ. ನಂ.002639 ನ್ನು ದಿನಾಂಕ 29-08-2013 ರಂದು ವಿತರಣೆ ಮಾಡಿರುತ್ತಾರೆ.

6. ಡಿ.ಆರ್.ಸಿ ನಂ.002639ನ್ನು ಟಿ.ಡಿ.ಆರ್ ಅರ್ಜಿದಾರರ ಪರವಾಗಿ ಪಡೆದ ಟಿ.ಡಿ.ಆರ್ ಬ್ರೋಕರ್‌ಗಳು ಕೋಟ್ಯಂತರ ರೂಪಾಯಿಗಳಿಗೆ ಮಾರಾಟ ಮಾಡಿ ಅಕ್ರಮ ಲಾಭ ಮಾಡಿಕೊಂಡು, ಅಷ್ಟೇ ಪ್ರಮಾಣದ ನಷ್ಟವನ್ನು ಸರ್ಕಾರಕ್ಕೆ ಉಂಟು ಮಾಡಿರುತ್ತಾರೆ.

7. ಆದರೆ ಡಿ.ಆರ್.ಸಿ ನೀಡಿ 6 ವರ್ಷಗಳೇ ಕಳೆದರೂ ಟಿ.ಡಿ.ಆರ್ ನೀಡಿರುವ ಕಟ್ಟಡಗಳನ್ನು ಡೆಮಾಲಿಷನ್ ಮಾಡಿ ಜಾಗದ ಭೌತಿಕ ಸ್ವಾಧೀನವನ್ನು ಪಡೆದು ರಸ್ತೆ ಅಗಲೀಕರಣ ಮಾಡಿರುವುದಿಲ್ಲ.

ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳ ವಿವಿಧ ತಂಡಗಳಿಂದ ಆರೋಪಿತ ಅಧಿಕಾರಿ ಮತ್ತು ಖಾಸಗಿ ವ್ಯಕ್ತಿಗಳಿಗೆ ಸಂಬಂಧಿಸಿದ **04 ಸ್ಥಳಗಳ ಮೇಲೆ** ಇಂದು ದಾಳಿ ನಡೆಸಲಾಗಿರುತ್ತದೆ. ಶೋಧನಾ ಕಾರ್ಯವು ಮುಂದುವರೆದಿದ್ದು ಈವರೆಗೆ ಶೋಧನೆ ನಡಸಲಾದ ಜಾಗಗಳ ಮಾಹಿತಿ ಈ ಕೆಳಕಂಡಂತಿರುತ್ತವೆ.

1. ಶ್ರೀ ಎಂ.ಎನ್ ದೇವರಾಜು, ಸಹಾಯಕ ಅಭಿಯಂತರರು, ಬಿಬಿಎಂಪಿ ಬೆಂಗಳೂರು ರವರ ಹೆಚ್.ಎಸ್.ಆರ್ ಲೇಔಟ್‌ನ ವಾಸದ ಮನೆ.
2. ಶ್ರೀ ಕೆ. ಪಿ. ನಾಗೇಶ್, ಮಧ್ಯವರ್ತಿ, ಇವರು ಪ್ರಸ್ತುತ ವಾಸ ಮಾಡುತ್ತಿರುವ ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಕಣ್ಣೂರು ಗ್ರಾಮದಲ್ಲಿನ ವಾಸ ಮನೆ.
3. ಶ್ರೀ. ಬಿ. ನಾಗರಾಜು, ಮಧ್ಯವರ್ತಿ, ಇವರು ಪ್ರಸ್ತುತ ವಾಸ ಮಾಡುತ್ತಿರುವ ಬೆಂಗಳೂರು ಪೂರ್ವ ತಾಲ್ಲೂಕು, ದೊಡ್ಡಗುಬ್ಬಿ ಅಂಚೆ, ಯರಪ್ಪನಹಳ್ಳಿ ಗ್ರಾಮದಲ್ಲಿನ ವಾಸ ಮನೆ.
4. ಶ್ರೀ ಸುಬ್ಬರಾವ್, ಟಿ.ಡಿ.ಆರ್ ಅರ್ಜಿದಾರರು ಹಾಗೂ ಹಿಂದಿನ ಭೂ ಮಾಲೀಕರು, ಇವರು ಪ್ರಸ್ತುತ ವಾಸ ಮಾಡುತ್ತಿರುವ ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ರಾಂಪುರ ಗ್ರಾಮದಲ್ಲಿನ ವಾಸ ಮನೆ.

ಭ್ರಷ್ಟಾಚಾರ ನಿಗ್ರಹ ದಳದ ವಿವಿಧ ತಂಡಗಳಿಂದ ಮೇಲ್ಕಂಡ ಸ್ಥಳಗಳಲ್ಲಿ ಶೋಧನಾ ಕಾರ್ಯ ಮುಂದುವರೆದಿದೆ.

# ದತ್ತು ಸ್ವೀಕಾರ

**ಬೆಂಗಳೂರು, ಆಗಸ್ಟ್ 25( ಕರ್ನಾಟಕ ವಾರ್ತೆ ) :**

**ಮೈಸೂರು ಮೃಗಾಲಯದ "ಪ್ರಾಣಿಗಳ ದತ್ತು ಸ್ವೀಕಾರ ಯೋಜನೆ" ಅಡಿಯಲ್ಲಿ ಶ್ರೀಮತಿ ಚೈತ್ರ ವಿ. ನಂದಿನಿ ಲೇಔಟ್ ಬೆಂಗಳೂರು ಇವರು ಹೆಣ್ಣು ಆನೆಮರಿ "ವೇದಾವತಿ" ಯನ್ನು ಒಂದು ಲಕ್ಷ ರೂ. ಪಾವತಿಸಿ ಒಂದು ವರ್ಷದ ಅವಧಿಗೆ ದತ್ತು ಸ್ವೀಕಾರ ಮಾಡಿರುತ್ತಾರೆ.**

**ಮೈಸೂರಿನ ಶೆಟ್ಟಿ ಟ್ಯೂಷನ್ ಸೆಂಟರ್, ಇವರು ಮ್ಯಾಂಡರಿನ್ ಡಕ್‌ನ್ನು, ಪಿ.ಆರ್. ಶೆಟ್ಟಿ ಸ್ಮಾರಕಅವರು ಲವ್‌ಬರ್ಡ್‌ನ್ನು, ಸುಜಾತ ಆರ್ ಶೆಟ್ಟಿ ಅವರು ರೋಸ್ ರಿಂಗ್ಡ್ ಪ್ಯಾರಾಕೀಟ್, ಬಿ.ಬಿ. ಐಷ ಜೀವ ನಿಧಿ ವೃದ್ಧಾಶ್ರಮ ಅವರು ನಾಗರ ಹಾವನ್ನು, ಅದಿತಿ ಮಲ್ಲೇಶ್ ಮಂಡ್ಯ ಅವರು ಬಿಳಿ ನವಿಲು, ಸಿ.ಆರ್. ಸುಧಾ ಮಂಡ್ಯ ಅವರು ಬಡ್ಜರಿಗಾರ್‌ನ್ನು ಒಂದು ವರ್ಷಗಳ ಕಾಲ ನಿಗದಿತ ಶುಲ್ಕವನ್ನು ಪಾವತಿಸಿ ದತ್ತು ಸ್ವೀಕಾರ ಮಾಡಿರುತ್ತಾರೆಂದು ಅಧಿಕೃತ ಪ್ರಕಟಣೆ ತಿಳಿಸಿದೆ.**

# <u>ಸಿ.ಟಿ. ರವಿ ದೆಹಲಿ ಭೇಟಿ ಫಲಪ್ರದ</u>

**ಬೆಂಗಳೂರು, ಆಗಸ್ಟ್ 25 (ಕರ್ನಾಟಕ ವಾರ್ತೆ)**

ರಾಜ್ಯದ ಸಂಪುಟ ಸಚಿವನಾಗಿ ಅಧಿಕಾರ ಸ್ವೀಕಾರ ಮಾಡಿದ ಮೇಲೆ ತಿಂಗಳಿಗೊಮ್ಮೆ, ತಪ್ಪಿದರೆ ಎರಡು ತಿಂಗಳಿಗೊಮ್ಮೆ ದೆಹಲಿಗೆ ಪ್ರವಾಸ ಬಹಳ ಸಾಮಾನ್ಯ. ಆದರೆ ಕೊರೋನಾ ಎಂಬ ಮಹಾಮಾರಿ ಬಂದ ನಂತರ ದೆಹಲಿ ಪ್ರವಾಸ ಸಾಧ್ಯವಾಗಿರಲಿಲ್ಲ ಹಾಗು ಮುಖತಃ ಭೇಟಿಯಾಗಿ ಮಾಡಬೇಕಾದ ಹಲವು ಕೆಲಸಗಳು ಹಾಗೆಯೇ ಉಳಿದುಕೊಂಡಿದ್ದವು. ರಾಜ್ಯದ ಸಚಿವನಾಗಿ ನಮ್ಮಇಲಾಖೆಯ ಹಾಗೂ ನಮ್ಮ ಜಿಲ್ಲೆಯ ಸಮಸ್ಯೆಗಳನ್ನು ಕೇಂದ್ರ ಸಚಿವರ ಗಮನಕ್ಕೆ ತಂದು ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಕೇಂದ್ರ ಸರಕಾರದ ಹಲವು ಸಚಿವರನ್ನು ಭೇಟಿಯಾಗಬೇಕಿತ್ತು. ಈ ನಿಟ್ಟಿನಲ್ಲಿ ಇತ್ತೀಚೆಗೆ, ಅಂದರೆ ಆಗಸ್ಟ್ 17ರಿಂದ 19ರವರೆಗೆ ದೆಹಲಿಗೆ ಭೇಟಿನೀಡಿದ್ದೆ. ದೆಹಲಿಗೆ ಹೋದ ಮಾರನೇ ದಿನ ದಿನಾಂಕ 18ರಬೆಳಿಗ್ಗೆ ಸನ್ಮಾನ್ಯ ಸದಾನಂದಗೌಡರಿಗೆ ಫೋನ್ಮಾಡಿದಾಗ ಅವರು ಬೆಂಗಳೂರಿನಿಂದ ಹೊರಟು ಮಧ್ಯಾಹ್ನದ ಹೊತ್ತಿಗೆ ದೆಹಲಿ ತಲುಪುತ್ತಾರೆ ಎಂಬ ಮಾಹಿತಿ ಸಿಕ್ಕಿತು. ಮತ್ತೋರ್ವ ಸಚಿವರಾದ ಶ್ರೀಜೋಶಿಯವರಿಗೆ ಫೋನ್ಮಾಡಿದಾಗ ನೇರವಾಗಿ ಫೋನ್ ಎತ್ತಿದ ಸಚಿವ ಪ್ರಹ್ಲಾದ್ಜೋಷಿಯವರು "ಹತ್ತು ಗಂಟೆಗೆ ಮನೆಗೆ ಬಂದುಬಿಡು" ಎಂದು ಹೇಳಿದರು. ಸರಿಯೆಂದು ಹೇಳಿದ 5 ನಿಮಿಷದಲ್ಲಿ ಮತ್ತೆ ಫೋನ್ಮಾಡಿ "ತಿಂಡಿಗೆಬಂದ್ಬಿಡು" ಎಂದವರು, ಒಂಬತ್ತುವರೆಗೆ ನಾನು ಮನೆ ತಲುಪುವಾಗ ಸಚಿವರು ತಯಾರಾಗಿ ತಿಂಡಿತಿನ್ನಲು ಕಾಯುತಿದ್ದರು. ಉಭಯ ಕುಶಲೋಪರಿಯ ನಂತರ ಸಚಿವರಲ್ಲಿ ನಾನು ದೆಹಲಿ ಪ್ರವಾಸದಲ್ಲಿ ಮಾಡಬೇಕಾದ ಕೆಲಸಗಳ ಹಾಗೂ ಭೇಟಿಯಾಗಬೇಕಾದ ವ್ಯಕ್ತಿಗಳ ಪಟ್ಟಿಯನ್ನು ಅವರ ಮುಂದಿಟ್ಟೆ. ಪಟ್ಟಿ ನೋಡಿದ ಜೋಷಿಯವರು"ಏನೋಪ್ರಧಾನಮಂತ್ರಿ ರಾಷ್ಟ್ರಪತಿ ಬಿಟ್ಟು ಎಲ್ಲರನ್ನೂ ಭೇಟಿ ಮಾಡುವಲಿಸ್ಟ್ ಂದಿದ್ದೀಯಾ" ಎಂದು ತಮಾಷೆ ಮಾಡಿ ಅವರ ಆಪ್ತಸಹಾಯಕರಾದ ಶ್ರೀನಾರಾಯಣಗಂಭೀರರಿಗೆ ಸಮಯಾವಕಾಶ ನಿಗದಿಮಾಡಲು ಸೂಚನೆ ನೀಡಿದರು. ಮೊದಲನೆಯದಾಗಿ ಕೇಂದ್ರ ಕ್ರೀಡಾ ಸಚಿವ ಶ್ರೀಕಿರಣ್ರಿಜಿಜು ಅವರಿಗೆ ಫೋನ್ಮಾಡಿ ಅವರಲ್ಲಿ" ಆಪ್ಕೊಪಥಾಹೈ ಸಿ.ಟಿ ರವಿ ಹಮಾರದೈನಾಮಿಕ್ಲೀಡರ್ಹೈಆಪ್ಕೊಮಿಲ್ನಾಚಹತೆಹೈ" ಎಂದು ಅಪಾಯಿಂಟ್ಮೆಂಟ್ಫಿಕ್ಸ್ಮಾಡಿಸಿದರು ಅವರ ಭೇಟಿಗೆ ಹೋದಾಗ ಸನ್ಮಾನ್ಯ ಕೇಂದ್ರ ಕ್ರೀಡಾಸಚಿವ ಶ್ರೀಕಿರಣ್ರಿಜಿಜು ಆತ್ಮೀಯವಾಗಿ ಬರಮಾಡಿಕೊಂಡು ಸುಮಾರು 45ನಿಮಿಷಗಳಿಗೂ ಹೆಚ್ಚುಕಾಲ ಕ್ರೀಡೆಮತ್ತು ತತ್ಸಸಂಬಂಧಿ ವಿಚಾರಗಳ ಕುರಿತುಚರ್ಚೆ/ಮಾತುಕತೆ ನಡೆಸಿದರು. ಈ ಭೇಟಿಯ ಫಲಸ್ವರೂಪವಾಗಿ ಖೇಲೋಇಂಡಿಯಾದ ಪಟ್ಟಿಯನ್ನು ಮಾನ್ಯ ಮಾಡುವ ಭರವಸೆಯನ್ನು ನೀಡಿದರು.

ಅಂದಿನ ಎರಡನೆ ಭೇಟಿ ದೇಶದ ಸನ್ಮಾನ್ಯ ವಿತ್ತಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್ ಅವರದ್ದು. ಮಧ್ಯಾನ್ಹ ಹನ್ನೆರಡುವರೆಗೆ ಪ್ರಹ್ಲಾದ್ಜೋಷಿಯವರು ಹಾಗು ನಾನು ಜೊತೆಯಾಗಿ ವಿತ್ತ ಸಚಿವೆಯವರನ್ನು ಭೇಟಿಯಾದೇವು.ಸುಯೋಗವೆಂದರೆ ಅಂದು ಅವರ ಹುಟ್ಟುಹಬ್ಬಕೂಡಾ ಆಗಿತ್ತು. ಜೋಶಿಜಿಯವರು ಹೂವಿನಗುಚ್ಛ ಮತ್ತು ಸ್ವೀಟ್ತೆಗೆದುಕೊಂಡರೆ, ನಾನು ನಮ್ಮ ಚಿಕ್ಕಮಗಳೂರಿನ ಕಾಫಿಪುಡಿ ಹಾಗೂ ಪುಸ್ತಕ ತೆಗೆದುಕೊಂಡೆ. ನಾವು ಭೇಟಿಯಾಗಲು ಬಂದ ಸಂದರ್ಭದಲ್ಲಿ ಶ್ರೀಮತಿ ನಿರ್ಮಲಾ ಸೀತಾರಾಮನ್ ಅವರು ಎದ್ದು ಬಂದು ಸ್ವಾಗತಿಸಿದರು, ಅವರಿಗೆ ಶುಭಾಶಯ ಹೇಳಿಸ್ವೀಟು, ಹೂಗುಚ್ಛ, ಪುಸ್ತಕಕೊಟ್ಟ ನಂತರ ನಿರ್ಮಲಾ ಸೀತಾರಾಮನ್ ಅವರು "ನಾನು ಪ್ರಹ್ಲಾದ್ಕೆಸಾಮ್ನೆಭಯಬೀತ್ಹೂಂ" ಎಂದು ಹೇಳಿದಾಗ ಪ್ರಹ್ಲಾದ್ಜೋಶಿಯವರು "ಮೈಆಪ್ಕೆಚೋಟೆಭಾಯಿಹೂ ಭಯಬೀತ್ಹೋನೆಕಿಅವಶ್ಯಕ್ತಾನಹಿ, ಬಸ್ಭಾಯಿಕಾಪ್ಯಾರ್ರಕನಾ" ಎಂದು ಆರಂಭವಾದ ಆತ್ಮೀಯ ಮಾತುಕತೆ ನಾನು ಘೋಷಿತ 'ಸಾಂಸ್ಕೃತಿಕವಿಶ್ವವಿದ್ಯಾನಿಲಯ'ದ ಬಗ್ಗೆ ಪ್ರಸ್ತಾಪಿಸಿ ಅದನ್ನು ಮೈಸೂರಲ್ಲಿ ಸ್ಥಾಪಿಸಲು ಶಿಫಾರಸು ಮಾಡುವಂತೆ ವಿನಂತಿಸಿದೆ. ರಾಜ್ಯದ ಕಾಫಿಬೆಳೆಗಾರರ, ಅಡಿಕೆ, ಮೆಣಸು, ಏಲಕ್ಕಿ, ತೆಂಗು ಬೆಳೆಗಾರರ ಬಗ್ಗೆ ಅವರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಗಮನಸೆಳೆದಾಗ ಅವರು ರಾಜ್ಯದ ವಿವಿಧ ಬೆಳಗಾರರ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿ ಯಾವ ರೀತಿ ಅವರಿಗೆ ಸಹಾಯ ಮಾಡಬಹುದೆಂದು ತೀರ್ಮಾನಿಸುವ ಎಂದು ನಿರ್ಧರಿಸಿ ನಮಗೆ ಚಹಾ ಪಾನದ ಬಳಿಕ ಅಲ್ಲಿಂದ ಬೀಳ್ಕೊಂಡೆವು.

ಮತ್ತೆ ಜೋಶಿಯವರ ಮನೆಗೆ ಬಂದು ಊಟ ಮಾಡಿ ಶ್ರೀಸದಾನಂದಗೌಡರಿಗೆ ಫೋನ್ಮಾಡಿ ಅವರನ್ನು ಭೇಟಿಯಾಗಿ 10 ವಿವಿಧ ಇಲಾಖೆಗಳ ಪತ್ರಗಳನ್ನು ಕೊಟ್ಟು, ಅವುಗಳ ಅನುಷ್ಠಾನಕ್ಕೆ ಸಹಾಯ ಮಾಡಬೇಕೆಂದು ವಿನಂತಿಸಿದಾಗ ಅವರು ಎಲ್ಲರಿಗೂ ನೀಡಿದ ಮನವಿ/ಅರ್ಜಿಗಳ ಪ್ರತಿಯನ್ನು ತಮಗೂ ಹಾಕುವಂತೆ ನಿರ್ದೇಶಿಸಿದರು. ಲೋಕಾಭಿರಾಮ ಮಾತುಕತೆಯ ನಂತರ ಕರ್ನಾಟಕ ಭವನ ೨ರಲ್ಲಿ ಭೇಟಿಗೆ ಬಂದಿದ್ದ ಪತ್ರಕರ್ತ ಮಿತ್ರರ ಜೊತೆ ಮಾತನಾಡಿ ಅಲ್ಲಿಂದ ಕೇಂದ್ರಮಾನವ ಸಂಪನ್ಮೂಲ ಸಚಿವರ ಭೇಟಿಗೆ ಜೋಶಿಯವರ ಹೊರಟೆವು.

ಕೇಂದ್ರ ಮಾನವಸಂಪನ್ಮೂಲ ಸಚಿವರಾದ ಡಾ.ರಮೇಶ್ಪೋಕ್ರಿಯಾಲ್ ಅವರು ತಮ್ಮ ಅಧಿಕೃತ ನಿವಾಸದಲ್ಲಿ ನಮ್ಮನ್ನು ಆತ್ಮೀಯವಾಗಿ ಬರ ಮಾಡಿಕೊಂಡರು. ಕನ್ನಡ ಶಾಸ್ತ್ರೀಯಭಾಷೆ, ಚಿಕ್ಕಮಗಳೂರಿನ ಇಂಜಿನಿಯರಿಂಗ್ಕಾಲೇಜ್ಹಾಗೂ ನೂತನ ಶಿಕ್ಷಣ ನೀತಿಯ (ನ್ಯೂಎಜುಕೇಶನ್ಪಾಲಿಸಿ)ಯ ಬಗ್ಗೆ ಸುದೀರ್ಘ ಮಾತುಕತೆ ನಡೆಯಿತು. ಇದರೊಂದಿಗೆ ಅಂದಿನ ದಿನಕ್ಕೆ ಹಾಕಿಕೊಂಡಿದ್ದ ಎಲ್ಲಾ ಭೇಟಿ ಅತ್ಯಂತ ಫಲಪ್ರಧವಾಗಿ ನಡೆಯಿತು.

ಮಾರನೆಯ ದಿನ ಬೆಳಗ್ಗೆ ಮಾನ್ಯ ಬಿಎಲ್‌ಸಂತೋಷ್ ಅವರನ್ನು ಭೇಟಿಯಾಗಿ ಅವರೊಂದಿಗೆ ಉಪಾಹಾರ ಮಾಡುತ್ತಾ ಸಂಘಟನೆ, ಅಭಿವೃದ್ಧಿ, ರಾಜ್ಯ ರಾಜಕಾರಣ, ಈಎಲ್ಲ ವಿಚಾರಗಳ ಬಗ್ಗೆ ಚರ್ಚಿಸಿ ಅಭಿಪ್ರಾಯ ವಿನಿಮಯ ಮಾಡಿದೆವು. ನಂತರ ಹನ್ನೊಂದುವರೆಗಂಟೆಗೆ ಬಿಜೆಪಿ ರಾಷ್ಟ್ರೀಯಅಧ್ಯಕ್ಷ ಜೆಪಿನಡ್ಡಾಜಿ ಅವರನ್ನು ಅವರ ಮನೆಯಲ್ಲಿ ಭೇಟಿ ಮಾಡಿ ಸುಮಾರು ಅರ್ಧಗಂಟೆಗೂ ಹೆಚ್ಚುಕಾಲ ಸಂಘಟನೆ ರಾಜಕಾರಣ, ಹಳೆ ಮೈಸೂರು ಪ್ರಾಂತ್ಯದಲ್ಲಿ ಪಕ್ಷದ ಬಲಉಳಿಸಿ ಹೆಚ್ಚಿಸಬೇಕಾದ ಅಗತ್ಯವನ್ನು ಕುರಿತು, ಇತ್ತೀಚೆಗೆ ನಡೆದ ಕೆ.ಜಿ. ಹಳ್ಳಿಡಿ.ಜೆ.ಹಳ್ಳಿ ಗಲಭೆಯ ಕುರಿತು ಚರ್ಚೆ ನಡೆಸಿದೆವು.ನಮ್ಮ ಪಕ್ಷದ ಹಿರಿಯರನ್ನು ಭೇಟಿ ಮಾಡುವ ಕಾರ್ಯವನ್ನು ಮುಗಿಸಿ ಶ್ರೀಪ್ರಲ್ಹಾದ್ಜೋಶಿಯವರಮನೆಗೆ ವಾಪಾಸಾದರೆ ಜೋಶಿಯವರು ಕ್ಯಾಬಿನೆಟ್ಮೀಟಿಂಗ್‌ನಲ್ಲಿ ಇದ್ದರು.ಅಲ್ಲಿಂದ ನಾವು ಜೊತೆಯಾಗಿ ಕೇಂದ್ರ ಸಂಸ್ಕೃತಿ ಹಾಗು ಪ್ರವಾಸೋದ್ಯಮ ಸಚಿವರಾದ ಶ್ರೀಪ್ರಲ್ಹಾದ್ಸಿಂಗ್‌ಪಟೇಲ್ ಅವರನ್ನು ಭೇಟಿ ಮಾಡಲು ಒಂದು ಗಂಟೆಗೆ ಸಮಯ ನಿಗದಿಯಾಗಿತ್ತು ಆದರೆ ಕ್ಯಾಬಿನೆಟ್ಮೀಟಿಂಗ್‌ನಲ್ಲಿ ಇದ್ದ ಅವರು ನನ್ನ ಬರುವಿಕೆಯ ವಿಚಾರ ತಿಳಿದು ನೇರವಾಗಿ " ರವಿ ನೀವು ನೇರವಾಗಿ ಪ್ರಲ್ಹಾದ್ಸಿಂಗ್‌ಪಟೇಲ್ ಅವರ ಮನೆಗೆ ಬನ್ನಿ ನಾನಲ್ಲಿಗೆ ಬರುತ್ತೇನೆ" ಎಂದು ಸೂಚನೆ ನೀಡಿದರು. ಸಚಿವರನ್ನು ಭೇಟಿಯಾಗಿ ಜೋಶಿಯವರ ಬರುವಿಕೆಯನ್ನು ಕಾಯುತ್ತಿರುವಾಗ ಅವರನ್ನು ಭೇಟಿಯಾಗಲು ಬಹುಉತ್ಸುಕರಾಗಿದ್ದ ಪಟೇಲರು ಎರಡು ಬಾರಿ ಕಾರು ಬಂದ ಸದ್ದುಕೇಳಿದಾಗ ಬಾಗಿಲ ಹತ್ತಿರಹೋಗಿ ಅದು ಬೇರೆಯದೇಕಾರು ಎಂದು ತಿಳಿದಾಗ ವಾಪಸು ಬಂದರು. ಅವರು ಸನ್ಮಾನ್ಯ ರಕ್ಷಣಾ ಸಚಿವರಾದ ಶ್ರೀರಾಜನಾಥ್ಸಿಂಗ್ ಅವರನ್ನು ಭೇಟಿಯಾಗಲು ತೆರಳಿರುತ್ತಾರೆ ಹಾಗಾಗಿ ಬರುವುದು ತಡವಾಗಬಹುದು, ನೀವುಗಳು ಮಾತುಕತೆ ಮುಗಿಸಿ ಎಂಬ ಸಂದೇಶ ಬಂದುದರಿಂದ ನಾವು ಮಾತುಕತೆ ಆರಂಭಿಸಿದೆವು. ರಾಜ್ಯ ಪ್ರವಾಸೋದ್ಯಮ ಇಲಾಖೆಯ ವಿವಿಧ ಯೋಜನೆಗಳನ್ನು, ವಿವಿಧ ಪ್ಯಾಕೇಜುಗಳ ಕುರಿತಾಗಿ ವಿವರ ಸಲ್ಲಿಸಿ, ಕೇಂದ್ರಸರಕಾರ ನೂತನವಾಗಿ ಸ್ಥಾಪನೆ ಮಾಡಲು ಹೊರಟಿರುವ ಸಂಸ್ಕೃತಿ ಮತ್ತು ಪರಂಪರೆ ವಿಶ್ವವಿದ್ಯಾನಿಲಯವನ್ನು ಕರ್ನಾಟಕದಲ್ಲಿ ಅದರಲ್ಲೂ ಮುಖ್ಯವಾಗಿ ಸಾಂಸ್ಕೃತಿಕ ನಗರ ಮೈಸೂರಲ್ಲಿ ಸ್ಥಾಪನೆ ಮಾಡಬೇಕು ಎಂಬ ಆಗ್ರಹದೊಂದಿಗೆ ಮಾತುಕತೆ ಮುಗಿಸಿ ಕೇಂದ್ರಸಾರಿಗೆ ಮತ್ತು ಭೂಹೆದ್ದಾರಿಗಳ ಸಚಿವರಾದ ಶ್ರೀನಿತಿನ್ಗಡ್ಕರಿ ಅವರನ್ನು ಭೇಟಿಯಾಗಲು ಅವರ ನಿವಾಸಕ್ಕೆ ತೆರಳಿದೆನು. ಅದೇ ಸಂದರ್ಭಕ್ಕೆ ಸರಿಯಾಗಿ ಅಲ್ಲಿಗೆ ಜೋಶಿಜಿಯವರು ಬಂದರು. ಗಡ್ಕರಿಯವರು ಕೆಲಸದ ವಿಚಾರದಲ್ಲಿ ಬಹಳ ಕರಾರುವಕ್ಕಾದ ಮನುಷ್ಯ, ನಾವು ತೆರಳುವುದಕ್ಕೆ ಮುಂಚಿತವಾಗಿ ನಮ್ಮ ಪತ್ರ ಮತ್ತು ಭೇಟಿಯ ವಿಚಾರ ಅರಿತು ಆ ಕೆಲಸಕ್ಕೆ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳನ್ನು ಕರೆಸಿಪೂರ್ವ ಯೋಜನೆ ನಡೆಸಿದ್ದರು. ಚಿಕ್ಕಮಗಳೂರು ಜಿಲ್ಲೆಯ ಹೆದ್ದಾರಿಗಳ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಚರ್ಚಿಸಿ, ಚಿಕ್ಕಮಗಳೂರು - ಕಡೂರು ರಸ್ತೆಯ ಸಿಒಎಸ್ಸಂಬಂಧಿಸಿದಂತೆ, ಬೇಲೂರು-ಚಿಕ್ಕಮಗಳೂರು ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿ ಎಂದು ಘೋಷಣೆಮಾಡಿ, ಭಾರತ್ಮಾಲಾಯೋಜನೆಯಡಿ ಅಭಿವೃದ್ಧಿಗೊಳಿಸಲು ಸಲ್ಲಿಸಿದ ಮನವಿಗೆ ಸಕಾರಾತ್ಮಕವಾಗಿಸ್ಪಂದಿಸಿ ಒಪ್ಪಿಗೆ ನೀಡಿದರು. ಮುಂದೆ ತೆಗೆದುಕೊಳ್ಳಬೇಕಾದ ನಿರ್ಧಾರಗಳ ಬಗ್ಗೆ ಅಲ್ಲಿಯೇ

ಅಧಿಕಾರಿಗಳಿಗೆ ನಿರ್ದೇಶನ ನೀಡಿ ಮದ್ಯಾಹ್ನದ ಊಟಕ್ಕೆ ನಮ್ಮನ್ನು ಆಹ್ವಾನಿಸಿದರು.ಊಟದ ಸಮಯದಲ್ಲಿ ಲಘುಹಾಸ್ಯಭರಿತ ಮಾತುಕತೆ, ರಾಷ್ಟ್ರದ ಕುರಿತಾದ ಚಿಂತನೆಗಳ ಬಗ್ಗೆ ಚರ್ಚೆ ನಡೆಯಿತು.

ಊಟ ಹಾಗು ಮಾತುಕತೆಯನ್ನು ಮುಗಿಸಿ ನಾನು ಜೋಶಿಜೀಯವರೊಂದಿಗೆ ಅವರ ಮನೆಗೆ ತೆರಳಿ ಅಲ್ಲಿ ಅವರಿಗೆ ಧನ್ಯವಾದ ತಿಳಿಸಿದೆನು. ದೆಹಲಿ ಪ್ರವಾಸದಲ್ಲಿಯಾರು ಯಾರನ್ನು ಭೇಟಿಮಾಡಬೇಕೆಂದು ಯೋಚನೆ ಹಾಗು ಯೋಜನೆ ಹಾಕಿಕೊಂಡು ಬಂದಿದ್ದೇನೋ ಆಎಲ್ಲಾ ಭೇಟಿಗಳು ಆಯಿತು. ಸನ್ಮಾನ್ಯ ಕೇಂದ್ರರೈಲ್ವೆಸಚಿವರಾದ ಶ್ರೀಪಿಯೂಷ್ಗೋಯಲ್ ಅವರಭೇಟಿ ಅವರು ಕ್ವಾರಂಟೈನ್ ಇದ್ದುದರಿಂದ ಸಾಧ್ಯವಾಗಲಿಲ್ಲ. ಆದರೆ ರೈಲ್ವೆ ರಾಜ್ಯಖಾತೆ ಸಚಿವರಾದ ಶ್ರೀಯುತ ಸುರೇಶಅಂಗಡಿಯವರನ್ನು ಭೇಟಿಯಾಗಿ ಚಿಕ್ಕಮಗಳೂರು - ಹಾಸನ ರೈಲ್ವೆ ಯೋಜನೆ ಕುರಿತಂತೆ ಸಮಾಲೋಚನೆ ನಡೆಸಿದೆವು, ಅವರು ಶೀಘ್ರದಲ್ಲಿ ಕರ್ನಾಟದಲ್ಲೇ ಈಕುರಿತಾಗಿ ಮೀಟಿಂಗ್ನಡೆಸಿ ಚರ್ಚೆನಡೆಸೋಣ ಎಂದು ಭರವಸೆ ನೀಡಿದರು. ಈನಡುವೆ ದೂರವಾಣಿ ಸಂಪರ್ಕಕ್ಕೆ ಸಿಕ್ಕಿದ ಪಿಯೂಷ್ಜಿ, ಭೇಟಿಯಾಗಲು ಸಾಧ್ಯವಾಗಲಿಲ್ಲ ಮುಂದಿನ ಬಾರಿ ಬಂದಾಗ ಭೇಟಿಯಾಗೋಣ ಎಂದು ಭರವಸೆ ನೀಡಿದರು ಮತ್ತು ಯೋಜನೆಗಳಿಗೆ ನಾನು ನಿರ್ದೇಶನ ನೀಡುತ್ತೇನೆ ಎಂದುಹೇಳಿದರು.

ಒಟ್ಟಾರೆಯಾಗಿ ಈಬಾರಿಯ ದೆಹಲಿ ಪ್ರವಾಸ ಫಲಪ್ರದವಾಗಿದೆ, ಈಭೇಟಿಗೆ ಅಂಕ ನೀಡುವುದಾದರೆ ಎಷ್ಟು ಅಂಕ ಎಂದು ಕೇಳಿದರೆ ಉತ್ತರ ನೂರಕ್ಕೆ ನೂರು. ಈಬಾರಿಯ ದೆಹಲಿ ಭೇಟಿನೂರಕ್ಕೆ ನೂರು ಪ್ರತಿಶತಯಶಸ್ಸಾಗಲು ಪ್ರಮುಖ ಕಾರಣ ಶ್ರೀಪ್ರಲ್ಹಾದ್ಜೋಶಿಯವರು. ಜೋಶಿಯವರು ನಾಲ್ಕು ಬಾರಿ ಸಂಸದರಾಗಿ, ರಾಜ್ಯ ಬಿಜೆಪಿ ಘಟಕದ ಅಧ್ಯಕ್ಷರಾಗಿ, ಕಳೆದ ಒಂದು ವರ್ಷದಿಂದ ಕೇಂದ್ರ ಸಚಿವರಾಗಿ ಪ್ರಧಾನಿಮೋದಿ, ಗ್ರಹ ಸಚಿವ ಅಮಿತ್ಷಾ ಅವರ ಜೊತೆ ಹತ್ತಿರದ ಒಡನಾಟ ಇಟ್ಟುಕೊಂಡು ಕೆಲಸ ಮಾಡುತ್ತಿರುವವರು. ಕೆಲವೊಬ್ಬರಿಗೆ ಅಧಿಕಾರದ ಜೊತೆ ಅಹಂಕೂಡ ಬಂದು ಬಿಡುತ್ತದೆ ಆದರೆ ಇದಕ್ಕೆ ಸಂಪೂರ್ಣ ಹೊರತಾದವರು ಜೋಶಿಯವರು.ನಾನಿದನ್ನು ಅವರನ್ನು ಹೊಗಳಲಿಕ್ಕೆ ಹೇಳುತ್ತಿಲ್ಲ, ನನ್ನ ಮತ್ತು ಅವರ ಸಂಬಂಧಕ್ಕೆ ಹೊಗಳಿ ಕೆಲಸಮಾಡಿಕೊಳ್ಳಬೇಕಾದ ಅಗತ್ಯಇಲ್ಲ.ಅಂತಹ ಒಂದು ಸಂಬಂಧ ನಮ್ಮಿಬ್ಬರದು.ತಾನು ಕೇಂದ್ರಸಚಿವ ಅನ್ನುವ ಅಹಂಮ್ಮಿಲ್ಲದೆ ನಾವು ಕರೆದಲ್ಲಿಗೆ ಬರುವ ಅವರ ಸರಳ ಸ್ವಭಾವ, ಅವರು ತಮ್ಮ ಸಂಬಂಧ ಮೂಲಕ ,ಸಲಿಗೆಯಿಂದ ನಮ್ಮ ಕೆಲಸವನ್ನು ಹಗುರಗೊಳಿಸುತ್ತಾರೆ. ಸರಳತೆ, ಆತ್ಮೀಯತೆ ಮತ್ತು ಅಹಂಕಾರ ರಹಿತವಾಗಿ ಅಧಿಕಾರ ಹೇಗೆ ನಡೆಸಬೇಕು ಎಂಬ ಪಾಠ ನಾವು ಅವರಿಂದ ಕಲಿಯಬೇಕು ಮತ್ತು ಈಬಾರಿ ಆ ಅವಕಾಶ ನನಗೆ ಸಿಕ್ಕಿತು .ಮಾಜಿ ಮುಖ್ಯಮಂತ್ರಿಯವರಾದ ಶ್ರೀಸದಾನಂದಗೌಡರು ಕೂಡ ಸರಳವ್ಯಕ್ತಿತ್ವ ಹೊಂದಿದವರು, ಎಲ್ಲ ಕೆಲಸಗಳಿಗೂ ಸ್ಪಂದಿಸುತ್ತಾರೆ. ಆದರೆ ಮಾಜಿಮುಖ್ಯಮಂತ್ರಿ ಮತ್ತು ಹಿರಿಯರು ಎಂಬ ಆಗಿರುವ ಕಾರಣಕ್ಕೆ ಅವರನ್ನು ನಮಗೆ ಬೇಕಾದ ಕಡೆಗೆಲ್ಲಾ ಕರೆದುಕೊಂಡು ಹೋಗಲು ಮನಸ್ಸಾಗುವುದಿಲ್ಲ, ಆದರೆ ಜೋಶಿಯವರು ಸಮಕಾಲೀನರು ಮತ್ತು ಸ್ನೇಹಿತರು

ಎಂಬ ಸಲಿಗೆಯಿಂದ ಕರೆದಾಗ ಅವರು ಬಿಗುಮಾನವಿಲ್ಲದೆ ಬಂದರು. ಬಂದದಷ್ಟೇ ಅಲ್ಲ, ಹೋದಕಡೆಯಲ್ಲ ನಮ್ಮ ಕೆಲಸ ನಡೆಯುವ ಹಾಗೆ ನೋಡಿಕೊಂಡರು.

ಇದನ್ನು ನೋಡಿ ನನಗೆ ನಮ್ಮ ಹಿರಿಯ ನಾಯಕರಾದ ದಿವಂಗತ ಅನಂತ್ಕುಮಾರ್ಅವರ ಅಕಾಲಿಕ ನಿಧನದಿಂದ ಸೃಷ್ಟಿಯಾದ ಶೂನ್ಯವನ್ನು ತುಂಬುವ ಕೆಲಸವನ್ನು ಪ್ರಲ್ಹಾದ್ಜೋಶಿಯವರು ಸಮರ್ಥವಾಗಿ ಮಾಡುತ್ತಿದ್ದಾರೆ ಎಂದು ನನಗನ್ನಿಸಿತು. ಅವರು ಇದೆ ರೀತಿ ಬೆಳೆಯುತ್ತಾ ಇದ್ದರೆ ದೆಹಲಿಯಲ್ಲಿ ಕರ್ನಾಟಕಕ್ಕೇ ಒಬ್ಬ ಗಟ್ಟಿ ನಾಯಕ,ರಾಜ್ಯವನ್ನು ಪ್ರತಿನಿಧಿಸುವ ನಾಯಕತ್ವ ಸಿಗುತ್ತದೆ ಎಂದು ನನಗೆ ಖಚಿತವಾಗಿದೆ.ದೆಹಲಿಯಲ್ಲಿ ಕರ್ನಾಟಕ ಬಲ ಪಡೆಯುತ್ತಿದೆ, ಒಂದು ಕಡೆ ಪಕ್ಷ ಸಂಘಟನೆಯಲ್ಲಿ ಶ್ರೀ ಬಿ . ಎಲ್ಸಂತೋಷ್ಜಿ, ಇನ್ನೊಂದು ಕಡೆ ಕೇಂದ್ರ ಸಚಿವರುಗಳು ತಮ್ಮ ಸಾಮರ್ಥ್ಯದ ಮುಖೇನ ರಾಜ್ಯವನ್ನು ದೆಹಲಿಯಲ್ಲಿ ಪ್ರತಿನಿಧಿಸಿ ನ್ಯಾಯಕೊಡಿಸುವ ಕೆಲಸ ಮಾಡುತ್ತಿದ್ದಾರೆ ಅವರಿಗೆ ಧನ್ಯವಾದಗಳು.

**ಛಾಯಾಚಿತ್ರ ಶೀರ್ಷಿಕೆ )**

**ಸಹಕಾರ ಸಚಿವ ಎಸ್. ಟಿ. ಸೋಮಶೇಖರ್ ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಸಹಕಾರ ಕೇಂದ್ರಬ್ಯಾಂಕ್‌ಗಳ ಪರಿಶೀಲನೆ ಸಭೆಯನ್ನು ವಿಧಾನ ಸೌಧದಲ್ಲಿ ಇಂದು ನಡೆಸಿದರು.**

## “ನಂದಿನಿ ಉತ್ಪನ್ನಗಳು ಕನ್ನಡ ಭಾಷೆಯ ರಾಯಭಾರಿಯಾಗಲಿ ಟಿಎಸ್.ನಾಗಾಭರಣ” :

## ಕೆ.ಎಂ.ಎಫ್ ಕನ್ನಡ ಅನುಷ್ಠಾನ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಧ್ಯಕ್ಷರ ತಾಕೀತು

ತನ್ನ ಎಲ್ಲ ಉತ್ಪನ್ನಗಳ ಮೇಲೆ ಕನ್ನಡವನ್ನು ಬಳಸುವ ಮೂಲಕ ಕನ್ನಡದ ರಾಯಭಾರಿಯಾಗಿ ಕೆಲಸ ಮಾಡುವ ನಿಟ್ಟಿನಲ್ಲಿ ಕರ್ನಾಟಕ ಸಹಕಾರಿ ಹಾಲು ಮಹಾ ಮಂಡಳಿಯ ಜವಾಬ್ದಾರಿ ಹೆಚ್ಚಿದೆ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಟಿ.ಎಸ್.ನಾಗಾಭರಣ ಅವರು ಹೇಳಿದರು.

ಕರ್ನಾಟಕ ಸಹಕಾರಿ ಹಾಲು ಮಹಾ ಮಂಡಳಿಯ ನಿಯಮಿತದ ಕನ್ನಡ ಅನುಷ್ಠಾನ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ತಮಿಳುನಾಡು, ಆಂಧ್ರಪ್ರದೇಶ, ದಕ್ಷಿಣ ಭಾರತ ಸೇರಿದಂತೆ ವಿಶ್ವದೆಲ್ಲೆಡೆ ಕೆ.ಎಂ.ಎಫ್‌ನ ಉತ್ಪನ್ನಗಳು ರಫ್ತಾಗುತ್ತಿದ್ದು, ಅವುಗಳ ಮೇಲೆ ಕನ್ನಡ ಸಂಸ್ಕೃತಿಯನ್ನು ಪರಿಚಯಿಸುವ ಹೆಸರುಗಳನ್ನು ಇಡಬೇಕು. ಆ ಮೂಲಕ ನಂದಿನಿ ಜತೆ ಕನ್ನಡವನ್ನು ಬ್ರಾಂಡ್ ಮಾಡುವಂತೆ ಸಲಹೆ ನೀಡಿದರು.

ದಕ್ಷಿಣ ಭಾರತದ ಅತಿ ದೊಡ್ಡ ಸಂಸ್ಥೆಯಾಗಿರುವ ಕೆ.ಎಂ.ಎಫ್, ೧೩೦ಕ್ಕೂ ಹೆಚ್ಚು ಹಾಲು ಮತ್ತು ಹಾಲಿನ ಉತ್ಪನ್ನಗಳ ವ್ಯಾಪಾರ ವಹಿವಾಟು ನಡೆಸುತ್ತಿದೆ. ಸಿಂಗಪೂರ್, ಮಲೇಶ್ಯಾ ಸೇರಿದಂತೆ ವಿಶ್ವದೆಲ್ಲೆಡೆ ರಫ್ತಾಗುತ್ತಿದೆ. ಹಾಗಾಗಿ ಪ್ರತೀ ಉತ್ಪನ್ನದ ಮೇಲೂ ಕನ್ನಡವನ್ನು ಬಳಸುವ ಹಾಗೂ ಪ್ರತೀ ಉತ್ಪನ್ನಕ್ಕೂ ಕನ್ನಡದ ವಿಶಿಷ್ಟ ಹೆಸರುಗಳನ್ನೇ ಇಟ್ಟು ಆ ಮೂಲಕ ಕಸ್ತೂರಿ ಕನ್ನಡದ ಕಂಪನ್ನು ವಿಶ್ವದೆಲ್ಲೆಡೆ ಪಸರಿಸುವ ರಾಯಭಾರಿಯಾಗುವಂತೆ ಸೂಚಿಸಿದರು.

ಕೆಲವು ನಂದಿನಿ ಅಂಗಡಿಗಳ ಹೆಸರು ಇಂಗ್ಲಿಷ್‌ನಲ್ಲಿರುವ ಬಗ್ಗೆ ಹಾಗೂ ಉತ್ಪನ್ನವೊಂದಕ್ಕೆ ಕನ್ನಡೇತರ ಹೆಸರಾದ "ಚಕ್ಕಿ ಲಾಡು" ಎಂದು ಹೆಸರಿಟ್ಟಿರುವ ಬಗ್ಗೆ ಪ್ರಾಧಿಕಾರಕ್ಕೆ ದೂರುಗಳು ಬಂದಿವೆ. ಈ ಬಗ್ಗೆ ಪತ್ರಿಕೆಗಳಲ್ಲೂ ವರದಿಯಾಗಿದೆ ಎಂದು ಪತ್ರಿಕೆಗಳಲ್ಲಿ ಪ್ರಕಟವಾದ ಮಾಹಿತಿಯನ್ನು ಆನ್‌ಲೈನ್‌ನಲ್ಲಿ ಪ್ರದರ್ಶಿಸಿ, ನಮ್ಮ ನೆಲದ ಸಂಸ್ಥೆ, ರೈತರ ಒಡನಾಡಿಯಾದ ಸಂಸ್ಥೆ ಇಂಗ್ಲಿಷ್‌ಗೆ ಬ್ರಾಂಡ್ ಆಗಿ ಕೆಲಸ ಮಾಡುವುದು ಎಷ್ಟು ಸರಿ ಎಂದು ಆತ್ಮವಿಮರ್ಶೆ ಮಾಡಿಕೊಳ್ಳಿ. ಜತೆಗೆ ಇದಕ್ಕೆ ಸಂಬಂಧಿಸಿದಂತೆ ಪ್ರಾಧಿಕಾರದಿಂದ ಕ್ರಮವಹಿಸುವಂತೆ ಪತ್ರ ಬರೆಯಲಾಗಿದೆ. ಈ ಬಗ್ಗೆ ಯಾವ ಅಧಿಕಾರಿ/ನೌಕರರ ಬಗ್ಗೆ ಕ್ರಮವಹಿಸಿದ್ದೀರಿ ಎಂಬ ಬಗ್ಗೆ ಸಭೆಗೆ ಮಾಹಿತಿ ನೀಡುವಂತೆ ಕೆ.ಎಂ.ಎಫ್ ನ ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚಿಸಿದರು.

ಭಾರತದಲ್ಲಿ ೨ನೇ ದೊಡ್ಡ ಮಹಾಮಂಡಳವಾಗಿರುವ ಕೆ.ಎಂ.ಎಫ್, ರೈತರನ್ನು ಆರ್ಥಿಕವಾಗಿ ಸಬಲರನ್ನಾಗಿ ಮಾಡಿದೆ. ಆದರೆ ತಮ್ಮ ಅಧೀನದ ಜಿಲ್ಲಾ ಒಕ್ಕೂಟಗಳ ಜಾಲತಾಣಗಳು ಇಂಗ್ಲಿಷಿನಲ್ಲಿದ್ದು, ಇವುಗಳನ್ನು ಕೂಡಲೇ ರಾಜ್ಯ ಸರ್ಕಾರದ ಆದೇಶದನ್ವಯ ಮಾದರಿ ಜಾಲತಾಣವಾಗಿ ರೂಪಿಸುವಂತೆ ನಿರ್ದೇಶನ ನೀಡಿದರು.

ಕರ್ನಾಟಕ ಸಹಕಾರಿ ಹಾಲು ಮಹಾ ಮಂಡಳಿಯ ವ್ಯವಸ್ಥಾಪಕ ನಿರ್ದೇಶಕರಾದ ಬಿ.ಸಿ.ಸತೀಶ್, ಇನ್ನು ಮುಂದೆ ತಯಾರಾಗುವ ಉತ್ಪನ್ನಗಳ ಮೇಲೆ ಕನ್ನಡವನ್ನು ಬಳಸುವಂತೆ ನಿರ್ದೇಶನ ನೀಡಲಾಗುವುದು ಮತ್ತು ನವೆಂಬರ್ ಒಳಗೆ ಜಾಲತಾಣವನ್ನು ಕನ್ನಡೀಕರಣಗೊಳಿಸಲಾಗುವುದು ಎಂದು ಭರವಸೆ ನೀಡಿದರು.

ಮಾನ್ಯ ಮುಖ್ಯಮಂತ್ರಿಗಳ ಇ-ಆಡಳಿತ ಸಲಹೆಗಾರರಾದ ಬೇಳೂರು ಸುದರ್ಶನ, ಪ್ರಾಧಿಕಾರ ಸದಸ್ಯರಾದ ರೋಹಿತ್ ಚಕ್ರತೀರ್ಥ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಡಾ.ಕೆ.ಮುರಳಿಧರ, ಅಧ್ಯಕ್ಷರ ಆಪ್ತ ಕಾರ್ಯದರ್ಶಿ ಡಾ.ವೀರಶೆಟ್ಟಿ, ಕನ್ನಡಪರ ಹೋರಾಟಗಾರರಾದ ಅರುಣ್ ಜಾವಗಲ್, ಕೆ.ಎಂ.ಎಫ್ ನ ನಿರ್ದೇಶಕ (ಆಡಳಿತ)ರಾದ ಡಾ.ಸಿ.ಎನ್.ರಮೇಶ್, ಅಪರ ನಿರ್ದೇಶಕರಾದ ಎಂ.ಎಸ್.ಸುಹೇಲ್, ವೆಬ್ ಪೋರ್ಟಲ್ ಯೋಜನಾಧಿಕಾರಿ ಸತೀಶ್ ಮತ್ತಿತರರು ಉಪಸ್ಥಿತರಿದ್ದರು.

## ಚಿತ್ರಶೀರ್ಷಿಕೆ

**ಬೆಂಗಳೂರು, ಆಗಸ್ಟ್ 25 (ಕರ್ನಾಟಕ ವಾರ್ತೆ):**

ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಇಂದು ಆಲಮಟ್ಟಿ ಅತಿಥಿ ಗೃಹದ ಸಭಾಂಗಣದಲ್ಲಿ ಮಳೆ ಹಾನಿಗೆ ಸಂಬಂಧಿಸಿದಂತೆ ಸಚಿವರು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿದರು.

ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ, ಜಲಸಂಪನ್ಮೂಲ ಸಚಿವ ರಮೇಶ್ ಜಾರಕಿಹೊಳಿ, ಕಂದಾಯ ಸಚಿವ ಆರ. ಅಶೋಕ್, ಗೃಹ ಸಚಿವ ಬಸವರಾಜ ಬೊಮ್ಮಾಯಿ, ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಎಸ್.ಆರ್. ಪಾಟೀಲ್, ಶಾಸಕ ಮುರುಗೇಶ್ ನಿರಾಣಿ ಮತ್ತಿತರರು ಉಪಸ್ಥಿತರಿದ್ದರು.

ಛಾಯಾಚಿತ್ರ ಲಗತ್ತಿಸಿದೆ)

**ಬೆಂಗಳೂರು, ಆಗಸ್ಟ್ 25 (ಕರ್ನಾಟಕ ವಾರ್ತೆ):**

ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಇಂದು ಆಲಮಟ್ಟಿ ಜಲಾಶಯಕ್ಕೆ ಬಾಗಿನ ಅರ್ಪಿಸಿದರು.

ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ, ಕಂದಾಯ ಸಚಿವ ಆರ. ಅಶೋಕ್, ಜಲಸಂಪನ್ಮೂಲ ಸಚಿವ ರಮೇಶ್ ಜಾರಕಿಹೊಳಿ, ಶಾಸಕ ಮುರುಗೇಶ್ ನಿರಾಣಿ, ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಎಸ್.ಆರ್. ಪಾಟೀಲ್, ಮತ್ತಿತರರು ಉಪಸ್ಥಿತರಿದ್ದರು

ಛಾಯಾಚಿತ್ರ ಲಗತ್ತಿಸಿದೆ)

## ಎಸಿಬಿ ದಾಳಿ

**ಬೆಂಗಳೂರು, ಆಗಸ್ಟ್ 25 (ಕರ್ನಾಟಕ ವಾರ್ತೆ):** ಬೆಂಗಳೂರು ಬಿದರಹಳ್ಳಿ ಹೋಬಳಿ ವ್ಯಾಪ್ತಿಗೆ ಸೇರಿದ ಜಮೀನಿಗೆ ಸಂಬಂಧಪಟ್ಟಂತೆ ಬೆಂಗಳೂರು ಬೊಮ್ಮನಹಳ್ಳಿ ಉಪ ನೊಂದಣಾಧಿಕಾರಿಗಳ ಕಛೇರಿಯಲ್ಲಿನ ಅಧಿಕಾರಿ/ಸಿಬ್ಬಂದಿ ತಮ್ಮ ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡು ಖಾಸಗಿ ವ್ಯಕ್ತಿಗಳೊಂದಿಗೆ ಶಾಮೀಲಾಗಿ ಸುಮಾರು ೮ ಎಕರೆ ಜಮೀನಿನ ದಾಖಲಾತಿಗಳನ್ನು ಟ್ಯಾಂಪರಿಂಗ್ ಮಾಡಿರುವ ಕುರಿತು ಭ್ರಷ್ಟಾಚಾರ ನಿಗ್ರಹ ದಳ ಬೆಂಗಳೂರು ನಗರ ಠಾಣೆಯಲ್ಲಿ ಪ್ರಕರಣ ದಾಖಲಿಸಿ ತನಿಖೆಯನ್ನು ಕೈಗೊಳ್ಳಲಾಗಿದೆ.

ದಿನಾಂಕ:24.08.2020 ರಂದು ಭ್ರಷ್ಟಾಚಾರ ನಿಗ್ರಹ ದಳ ಬೆಂಗಳೂರು ನಗರ ಠಾಣೆಯ ವಿವಿಧ ತಂಡಗಳಿಂದ ಆರೋಪಿತ ಖಾಸಗಿ ವ್ಯಕ್ತಿಗಳ ಮನೆ ಮತ್ತು ಗೇಸ್ಟ್ ಹೌಸ್ ಹಾಗೂ ಬೊಮ್ಮನಹಳ್ಳಿ ಉಪ ನೊಂದಣಾಧಿಕಾರಿಗಳ ಕಛೇರಿಯ ಮೇಲೆ ದಾಳಿ ನಡೆಸಲಾಗಿರುತ್ತದೆ. ಶೋಧನೆ ನಡೆಸಲಾದ ಜಾಗಗಳ ಮಾಹಿತಿ ಈ ಕೆಳಕಂಡಂತಿರುತ್ತದೆ.

1. ಹಿರಿಯ ಉಪ ನೊಂದಾಣಿಕಾರಿಗಳು ಬೊಮ್ಮನಹಳ್ಳಿ, ಬೆಂಗಳೂರು ಇವರ ಕಛೇರಿ.

2. ಶ್ರೀ ಎಸ್.ರಾಜಪ್ಪ ಬಿನ್ ಶಾಮಯ್ಯ ಇವರ ಪರಮನಹಳ್ಳಿ ವಿಲೇಜ್ ಜಕ್ಕೇನಹಳ್ಳಿ ಹೋಬಳಿ ಹೋಸಕೋಟೆ ತಾಲ್ಲೂಕು ಇಲ್ಲಿಯ ವಾಸದ ಮನೆ.
3. ಶ್ರೀ ಮೋಹನ್ ಕುಮಾರ್ ಬಿನ್ ಕೃಷ್ಣಪ್ಪ ಇವರ ಬಿಳಿಶಿವಾಲೆ ಗ್ರಾಮ ಕೊತ್ತನೂರು ಅಂಚೆಯಲ್ಲಿನ ವಾಸದ ಮನೆ.
4. ಶ್ರೀ ಮೋಹನ್ ಕುಮಾರ್ ಬಿನ್ ಕೃಷ್ಣಪ್ಪ ಇವರಿಗೆ ಸೇರಿದ ಹೆಚ್.ಆರ್.ಬಿ.ಆರ್ ಲೇಔಟ್, ಬೆಂಗಳೂರುನಲ್ಲಿನ ಗೇಸ್ಟ್ ಹೌಸ್.

ಭ್ರಷ್ಟಾಚಾರ ನಿಗ್ರಹ ದಳ, ಬೆಂಗಳೂರು ನಗರ ಠಾಣೆಯ ವಿವಿಧ ತಂಡಗಳಿಂದ ಮೇಲ್ಕಂಡ ಸ್ಥಳಗಳಲ್ಲಿ ಶೋಧನೆ ಕಾರ್ಯ ಕೈಗೊಂಡು ತನಿಖೆಗೆ ಸಂಬಂಧಪಟ್ಟಂತೆ ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ಮತ್ತು ಆರೋಪಿತ ಖಾಸಗಿ ವ್ಯಕ್ತಿಗಳ ವಶದಿಂದ ದಾಖಲಾತಿಗಳನ್ನು ವಶಪಡಿಸಿಕೊಳ್ಳಲಾಗಿದೆ, ಪ್ರಕರಣದ ತನಿಖೆ ಮುಂದುವರೆದಿದೆ.

## ಶಿಕ್ಷಕರ ಸಾಮರ್ಥ್ಯಾಭಿವೃದ್ಧಿ ಕಾರ್ಯಗಾರ
## ಸಮಾರೋಪ ಸಮಾರಂಭ

**ಬೆಂಗಳೂರು, ಆಗಸ್ಟ್ 25 (ಕರ್ನಾಟಕ ವಾರ್ತೆ):** ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಆಶ್ರಯದಲ್ಲಿ ದಿನಾಂಕ 18.08.2020 ರಿಂದ 25.08.2020 ರವರೆಗೆ ನಡೆದ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮದಲ್ಲಿ **“ಕಾನೂನು ಮತ್ತು ದುರ್ಬಲರು”** ಎಂಬ ವಿಷಯದ ಕುರಿತಂತೆ ನಡೆದ ಒಂದು ವಾರದ ಶಿಕ್ಷಕರ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಈ ದಿನ ದಿನಾಂಕ 25.08.2020ರಂದು ಕರ್ನಾಟಕ ವಿಧಾನಸಭೆಯ ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿಯವರು ಆನ್‌ಲೈನ್ ಮೂಲಕ ಸಮಾರಂಭದಲ್ಲಿ ಭಾಗವಹಿಸುತ್ತಾ ಸಮಾರೋಪ ಭಾಷಣ ಮಾಡಿದರು.

ಸಮಾರೋಪ ಭಾಷಣದಲ್ಲಿ ಸನ್ಮಾನ್ಯ ಸಭಾಧ್ಯಕ್ಷರು, **“ಈ ಒಂದು ಶಿಕ್ಷಕರ ಸಾಮಾರ್ಥ್ಯಾಭಿವೃದ್ಧಿ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯವನ್ನು ಪ್ರಶಂಸಿಸುತ್ತಾ ಶಿಕ್ಷಕರ ಕಲಿಕಾ ಸಾಮರ್ಥ್ಯವನ್ನು ಹೆಚ್ಚಿಸಲು ಈ ರೀತಿಯ ಕಾರ್ಯಕ್ರಮಗಳ ಅಗತ್ಯವಿದ್ದು, ವಿದ್ಯಾರ್ಥಿಗಳಿಗೆ ವೃತ್ತಿಯಲ್ಲಿ ಪ್ರೇರಣೆ ಸಿಗುವುದಕ್ಕೂ ಸಹ ಇಂತಹ ಕಾರ್ಯಕ್ರಮಗಳು ಸಹಕಾರಿಯಾಗಿವೆ ಎಂದು ಅಭಿಪ್ರಾಯಪಟ್ಟರು. ಅಲ್ಲದೇ ಪ್ರತಿಭಾವಂತ ಪದವೀಧರರು ಶಿಕ್ಷಕ ಸಮೂಹವನ್ನು ಸೇರುವಂತಹ ಯೋಜನೆಗಳನ್ನು ರೂಪಿಸಿ ಸದರಿ ಕ್ಷೇತ್ರವನ್ನು ಬಲಪಡಿಸುವುದು ಈ ದಿನದ ಅವಶ್ಯಕತೆ ಎಂಬುದನ್ನು ಜ್ಞಾಪಿಸಿದರು.**

ಇಂತಹ ಕಾರ್ಯಕ್ರಮಗಳನ್ನು ರೂಪಿಸುವ ಮೂಲಕ ಹಾಲಿ ಇರುವ ಕಾನೂನುಗಳು ಸಮಾಜದ ದುರ್ಬಲ ವರ್ಗಕ್ಕೆ ಅನುಕೂಲವಾಗುವಂತೆ ತೀವ್ರತರವಾದ ಕಾರ್ಯತಂತ್ರವನ್ನು ರೂಪಿಸಬೇಕು. ಒಂದು ವೇಳೆ ಹಾಲಿ ಇರುವ ಕಾನೂನಿನಲ್ಲಿ ಅವಕಾಶವಿಲ್ಲದೇ ಇದ್ದಲ್ಲಿ ತಿದ್ದುಪಡಿಯನ್ನು ತರಲು ನನ್ನನ್ನೂ ಸೇರಿದಂತೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿರುವ ಸಂವಿಧಾನಿಕ ಸ್ಥಾನದಲ್ಲಿರುವವರನ್ನು ಪ್ರೇರೇಪಿಸಿ ಅಗತ್ಯ ಕ್ರಮಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಕರ್ನಾಟಕ ಕಾನೂನು ವಿಶ್ವವಿದ್ಯಾಲಯ ಕೇವಲ ಹತ್ತು ವರರ್ಷಗಳಲ್ಲಿ ಒಂದು ಮಾದರಿ ವಿಶ್ವವಿದ್ಯಾಲಯವಾಗಿ ಬೆಳೆದ ರೀತಿಯ ಕುರಿತಂತೆ ಸಂತಸ ವ್ಯಕ್ತಪಡಿಸಿ ಮುಂದೆ ಬರುವ ದಿನಗಳಲ್ಲಿ ಈ ವಿಶ್ವವಿದ್ಯಾಲಯವು ದೇಶದಲ್ಲಿ ಅಲ್ಲದೇ ವಿಶ್ವದಲ್ಲಿಯೇ ಮಾದರಿ ವಿಶ್ವವಿದ್ಯಾಲಯವಾಗಿ ಬೆಳೆಯಲಿ ಎಂದು ಹಾರೈಸಿದರು.

ಕಾನೂನು ಸಮಾಜದ ಅಂತರಾತ್ಮ. ಸಾಮಾಜಿಕ ಕಳಕಳಿರಹಿತ ಕಾನೂನು ಊಹೆಗೂ ಅಸಾಧ್ಯ. ಕಾನೂನಿನ ಅರ್ಥ, ಸ್ವರೂಪ ಹಾಗೂ ಉದ್ದೇಶಗಳಿಗೆ ಸಂಬಂಧಿಸಿದಂತೆ ಜನ್ಮತಳೆದ ವಿವಿಧ ಕಾನೂನು ಸಿದ್ಧಾಂತಗಳ ಪೈಕಿ ಸಾಮಾಜಿಕ ಕಾನೂನು ಸಿದ್ಧಾಂತವು ಸಮಾಜವನ್ನೇ ತನ್ನ ಅವಿಭಾಜ್ಯ ಅಂಗವಾಗಿ ಪ್ರದರ್ಶಿಸಿ, ಸಾಮಾಜಿಕ ವ್ಯವಸ್ಥೆಯಲ್ಲಿ ಕಾನೂನಿಗಿರುವ ಮಹತ್ವವನ್ನು ಅಕ್ಷರಶಃ ನಿರೂಪಿಸಿದೆ.

ಪ್ರಸಿದ್ಧ ನ್ಯಾಯಶಾಸ್ತ್ರಜ್ಞರಾದ ಬೆಂಜಮಿನ್ ಕಾರ್ಡೋಜೊರವರ ಪ್ರಕಾರ, ಕಾನೂನಿನ ಪ್ರಥಮ ಕಾರಣವೇ ಸಮಾಜ. ಸಾಮಾಜಿಕ ಕಾನೂನು ಒಪ್ಪಂದ ಸಿದ್ಧಾಂತದ ಪ್ರತಿಪಾದಕರಾದ ಹಾಬ್ಸ್, ರೂಸೋ, ಲಾಕ್‌ರವರು ಸಹ ವಿವಿಧ ಪರಿಕಲ್ಪನೆಗಳಾದ ರಾಜ್ಯ ಕಾನೂನು ಹಾಗೂ ಸಮಾಜಗಳನ್ನು ಸಾಮಾಜಿಕ ವ್ಯವಸ್ಥೆಯಡಿಯಲ್ಲಿಯೇ ಪ್ರತಿಪಾದಿಸಿರುವುದು ಕಂಡುಬರುತ್ತದೆ.

ಇಂತಹ ಪರಿಪೂರ್ಣ ಸಮಾಜದ ಹಾಗೂ ಅರ್ಥಪೂರ್ಣ ವ್ಯವಸ್ಥೆಯ ಯಶಸ್ಸು, ಆ ಸಮಾಜದಲ್ಲಿನ ದುರ್ಬಲ ವರ್ಗಗಳಿಗೆ ನೀಡಲಾಗಿರುವ ಸ್ಥಾನಮಾನಗಳು ಹಾಗೂ ಸರ್ಕಾರ ಅಂತಹ ವರ್ಗಗಳ ಶ್ರೇಯೋಭಿವೃದ್ಧಿಗೆ ಕೈಗೊಂಡ ಕ್ರಮಗಳನ್ನು ಆಧರಿಸಿರುತ್ತದೆ. ಸಾರ್ಥಕ ಸಮಾಜ ಹಾಗೂ ಮುತ್ಸದಿ ವ್ಯವಸ್ಥೆಯ ಮಾನದಂಡವಾಗಿ ದುರ್ಬಲ ವರ್ಗಗಳಿಗೆ ನೀಡಲಾಗಿರುವ ಸಂರಕ್ಷಣೆಗಳನ್ನು ಪರಿಗಣಿಸಲಾಗುತ್ತದೆ. ರಾಜ್ಯದ ಪರಿಕಲ್ಪನೆಯೇ ಸಮಾಜದ ಆಧಾರವಾಗಿರುವ ಕಾರಣ ಆಧುನಿಕ ರಾಜ್ಯಗಳು ತಮ್ಮ ಬಹುಮುಖ ಕಾರ್ಯಕ್ರಮಗಳ ಜೊತೆ ಸಮಾಜಮುಖಿ ಕಾರ್ಯಕ್ರಮಗಳಿಗೆ ಅಧಿಕ ಒತ್ತು ನೀಡಬೇಕಾದ ಅಗತ್ಯಕ್ಕೊಳಗಾಗಿವೆ. ಸಂವಿಧಾನಿಕ ನೈತಿಕತೆ, ಅತರಾಷ್ಟ್ರೀಯ ಬದ್ಧತೆ ಹಾಗೂ ಕಾನೂನಿನ ಆಳ್ವಿಕೆಯಂತಹ ಪರಿಕಲ್ಪನೆಗಳು ದುರ್ಬಲ ವರ್ಗಗಳ ಕಡೆಗಿನ ರಾಜ್ಯದ ಕರ್ತವ್ಯಗಳನ್ನು ಇಮ್ಮಡಿಗೊಳಿಸಿವೆ.

ಈ ಹಿನ್ನೆಲೆಯಲ್ಲಿ ದುರ್ಬಲ ವರ್ಗಗಳಾದ ಮಹಿಳೆ, ಮಕ್ಕಳು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು, ಅಂಗವಿಕಲರು, ಪ್ರಕೃತಿಕ ವಿಕೋಪಕ್ಕೊಳಗಾದ ಸಂತ್ರಸ್ತರು ಮುಂತಾದವರ ಸ್ಥಿತಿ–ಗತಿಗಳನ್ನು ಸುಧಾರಿಸಲು ಸಾಕಷ್ಟು ಕಾನೂನುಗಳು ಅಸ್ತಿತ್ವವನ್ನು ಕಂಡುಕೊಂಡಿವೆ. ಆದಾಗ್ಯೂ ಅಂತಹ ಕಾನೂನುಗಳ ಅರ್ಥವಿವರಣೆ ಹಾಗೂ ಅನ್ವಯದಲ್ಲಿನ ವಸ್ತುನಿಷ್ಠತೆಯ ಕೊರತೆಯಿಂದಾಗಿ ಸದರಿ ಕಾನೂನುಗಳು ಪರಿಣಾಮಕಾರಿಯಾಗಿ ಜಾರಿಯಾಗದಿರುವುದು, ಅದರ ಫಲವಾಗಿ ಈ ದುರ್ಬಲ ವರ್ಗಗಳು ತಮಗೆ ಅರ್ಹತೆಯುಳ್ಳ ಸೌಲಭ್ಯಗಳಿಂದ ವಂಚಿತವಾಗಿರುವುದು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ.

ದುರ್ಬಲ ವರ್ಗಗಳ ಆರ್ತನಾದದಲ್ಲಿ ಪ್ರಬಲವಾದಂತಹ ಧ್ವನಿ ಮಹಿಳೆಯರದ್ದು. ಸಂಖ್ಯಾ ಬಲದಲ್ಲಿ ಸರಿಸುಮಾರು ಪುರಷರಷ್ಟೇ ಸಮ ಸಂಖ್ಯೆಯಲ್ಲಿರುವ ಮಹಿಳೆಯರು ಪುರಷ ಪ್ರಧಾನ ಸಮಾಜದ ಬಾಹುಳ್ಯವೇ ಕಾರಣವಾಗಿದೆ. ಅಸಮಾನತೆ ಹಾಗೂ ಶೋಷಣೆಗೆ ಒಳಗಾಗಿರುವುದು ಬಹುತೇಕ ರಾಷ್ಟ್ರಗಳ ಸ್ಥಿತಿಗತಿಗಳಿಂದ ವಿಧಿತವಾಗಿದೆ. ಬಹಳಷ್ಟು ಕಾನೂನುಗಳು ಶಾಸಕಾಂಗದಿಂದ ರಚನೆಗೊಂಡಿದ್ದರೂ ಸಹ ಗತಕಾಲದಿಂದಲೂ ಬೇರೂರಿರುವ ಮಹಿಳೆಯರ ವಿರುದ್ಧದ ಅನ್ಯಾಯ ಹಾಗೂ ಅನಿಷ್ಠ ಪದ್ಧತಿಗಳನ್ನು ತೆರೆಮರೆಗೆ ಸರಿಸಲು ವಿಫಲವಾಗಿವೆ. ರಾಷ್ಟ್ರದ, ಸಮಾಜದ, ಕುಟುಂಬದ ಹಾಗೂ ವ್ಯಕ್ತಿಯೊಬ್ಬನ ಶ್ರೇಯೋಭಿವೃದ್ಧಿಯಲ್ಲಿ ಮಹಿಳೆಗೆ ಪುರಷನಷ್ಟೇ ಸರಿಸಮಾನಾದ ಹೆಗಲುಬಾರವಿದ್ದರೂ ಮಡಿವಂತಿಕೆಯ ಹಿಡಿತ ಮಹಿಳೆಯರು ತಮಗೆ ಧಕ್ಕಬೇಕಾದ ಫಲವನ್ನು ಧಕ್ಕಿಸಿಕೊಳ್ಳುವಲ್ಲಿ ತೊಡಕಾಗಿ ಪರಿಣಮಿಸಿದೆ. ಈ ಹಿನ್ನೆಲೆಯಲ್ಲಿ ಮಹಿಳೆಯರ ಆಸ್ತಿ ಹಕ್ಕು, ವೈವಾಹಿಕ ಹಕ್ಕು ಹಾಗೂ ಸೂಕ್ತ ರಕ್ಷಣೆಯಂತಹ ಹಕ್ಕುಗಳನ್ನು ಅಮೂಲ್ಯಾಗ್ರವಾಗಿ ಪುನರ್ಪರಿಶೀಲಿಸಬೇಕಾದ ಅಗತ್ಯವಿದೆ. ಕಾನೂನು ಈ ಅಗತ್ಯತೆಯನ್ನು ಹರಿತಗೊಳಿಸಬಲ್ಲದು ಎಂಬುದು ಪ್ರಬಲ ನಂಬಿಕೆ.

ದುರ್ಬಲ ವರ್ಗಗಳ ಗುಂಪುಗಳಲ್ಲಿ ನಿಲ್ಲುವಂತಹ ಮತ್ತೊಂದು ಪ್ರಮುಖ ವರ್ಗ ಮಕ್ಕಳು. ರಾಷ್ಟ್ರದ ಅಭಿವೃದ್ಧಿಗೆ ಮೊಳಕೆಯಾದಂತಹ ಮಕ್ಕಳಿಗೆ ಸ್ವಚ್ಛ ಹಾಗೂ ಪರಿಶುದ್ಧ ವಾತಾವರಣವನ್ನು ನಿರ್ಮಿಸಿಕೊಟ್ಟಾಗಲಷ್ಟೇ ಆದರ್ಶ ರಾಷ್ಟ್ರ ನಿರ್ಮಾಣ ಸಾಧ್ಯ. ಆದಾಗ್ಯೂ ಇತ್ತೀಚಿನ ದಿನಗಳಲ್ಲಿ ಮಕ್ಕಳ ಮೇಲಿನ ದೌರ್ಜನ್ಯ ಹಾಗೂ ಮೂಲಭೂತ ಹಕ್ಕುಗಳ ಉಲ್ಲಂಘನೆಯಂತಹ ಪ್ರಕರಣಗಳು ಅಸ್ಥಿತ್ವದಲ್ಲಿರುವ ಮಕ್ಕಳ ಬಗೆಗಿನ ಕಾನೂನಿನ ಬಗ್ಗೆ ಮರುಚಿಂತಿಸಬೇಕಾದ ಅಗತ್ಯತೆಯನ್ನು ಸೃಷ್ಟಿಸಿವೆ. ಇತರ ದುರ್ಬಲ ವರ್ಗಗಳಾದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಿಂದುಳಿದ ವರ್ಗಗಳು, ಅಂಗವಿಕಲರು, ಪ್ರಕೃತಿಕ ವಿಕೋಪಕ್ಕೊಳಗಾದ ಸಂತ್ರಸ್ತರೂ ಸಹ ಅಸಹಾಯಕ ಸ್ಥಿತಿಯಲ್ಲಿ ಇರುವುದು ಸ್ಪಷ್ಟವಾಗಿ ಗೋಚರಿಸುತ್ತದೆ.

ಈ ಹಿನ್ನಲೆಯಲ್ಲಿ ಅಸ್ಥಿತ್ವದಲ್ಲಿರುವ ಕಾನೂನುಗಳ ವಸ್ತುನಿಷ್ಠತೆಯನ್ನು, ಅವುಗಳ ಅನ್ವಯ ಹಾಗೂ ಅರ್ಥ ವ್ಯಾಖ್ಯಾನಗಳನ್ನು ವೃದ್ಧಿಗೊಳಿಸುವಲ್ಲಿ ಕಾನೂನು ಉಪನ್ಯಾಸಕರು ಹಾಗೂ ಕಾನೂನಿನ ಜೊತೆ ನಿಕಟ ಸಂಪರ್ಕವನ್ನು ಹೊಂದಿರುವ ಸಮಾಜಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಕಾರ್ಯ, ಮಹಿಳಾ ಅಧ್ಯಯನದಂತಹ ಉಪನ್ಯಾಸಕರು ಈ ಕಾನೂನುಗಳ ವಿವಿಧ ಮಜಲುಗಳನ್ನು ಹಾಗೂ ಈ ಕಾನೂನುಗಳ ಯಶಸ್ಸಿನ ಏರಿಳಿತಕ್ಕೆ ಕಾರಣವಾಗುವ ಅಂಶಗಳನ್ನು ಮನಗಂಡು ಆ ಪ್ರಕಾರ ಅಸ್ಥಿತ್ವದಲ್ಲಿರುವ ಕಾನೂನು ವ್ಯವಸ್ಥೆಯನ್ನು ತಮ್ಮ ತಮ್ಮ ಅಧ್ಯಯನಗಳ ವಿದ್ಯಾರ್ಥಿಗಳಿಗೆ ಬೋಧಿಸಬೇಕಾದ ಅಗತ್ಯವಿರುತ್ತದೆ. ಈ ದುರ್ಬಲ ವರ್ಗಗಳ ಕಾನೂನು ವ್ಯವಸ್ಥೆಯ ಬೆನ್ನೆಲುಬನ್ನು ಬಲಪಡಿಸಲು ಅವಶ್ಯಕವಾದಂತಹ ಅನುಭವ ಆಧರಿತ ಉಪನ್ಯಾಸಗಳ ಅವಶ್ಯಕತೆಯ ಹಿನ್ನೆಲೆಯಲ್ಲಿ ಈ ಶಿಕ್ಷಕರ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.